ಸ್ವಾಯತ್ತತೆ ಸ್ವಯಂ ಆಡಳಿತ ಸ್ವಯಂ ನಿಯಂತ್ರಣ ನಮ್ಮ ಧ್ಯೇಯ

ಸ್ವಾಭಿಮಾನಿ ಸಹಕಾರಿ

ಯುಗಾದಿ ಹಬ್ಬದ ಶುಭಾಶಯಗಳು

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 11 Issue - 4 Swabhimani Sahakari Monthly Pages - 20 ₹ - 12 April 2013

ವಸಂತ

ವಸಂತ ಬಂದ, ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ,
ಕೂವೂ, ಜಗ್ ಜಗ್, ಪುವ್ವೀ ಟುವಿಟ್ಟವೂ !

– ಬಿ.ಎಂ.ಶ್ರೀ



ಡಾ. ಬಿ.ಆರ್. ಅಂಬೇಡ್ಕರ್, ಶ್ರೀ ರಾಮ, ಭಗವಾನ್ ಮಹಾವೀರ – ಜಯಂತಿ ಶುಭಾಶಯಗಳು

– ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ.

ಸೌಹಾರ್ದ ಸಹಕಾರಿಗಳ ಸಂಖ್ಯೆ : 2429 – 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ – 500

ಅಧ್ಯಕ್ಷರ ಮಾತು

ಸಂವಿಧಾನಕ್ಕೆ 97ನೇ ತಿದ್ದುಪಡಿಯಾಗಿ ಸಹಕಾರಿ ಕ್ಷೇತ್ರಕ್ಕೆ ಸಂವಿಧಾನಾತ್ಮಕ ಮಾನ್ಯತೆ ದೊರೆತಿದೆ. ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವುದು ಈ ದೇಶದ ಪ್ರಜೆಗಳ ಮೂಲಭೂತ ಹಕ್ಕು ಎಂದು ಈ ತಿದ್ದುಪಡಿ ಘೋಷಿಸಿದೆ. ಇದಕ್ಕನುಗುಣವಾಗಿ ರಾಜ್ಯದ 1959ರ ಕಾಯ್ದೆ ಹಾಗೂ 1997 ರ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗಳನ್ನು 2012 ರಲ್ಲಿ ರಾಜ್ಯ ಸರಕಾರ ಅಂಗೀಕರಿಸಿದೆ.

2013 ಸಹಕಾರಿ ಕ್ಷೇತ್ರದ ಪರಿವರ್ತನೆಯ ಪರ್ವಕಾಲ

ಸಹಕಾರಿ ಬಂಧುಗಳಿಗೆಲ್ಲ ವಿಜಯನಾಮ ಸಂವತ್ಸರ ಯುಗಾದಿಯ ಹಾರ್ದಿಕ ಶುಭಾಶಯಗಳು. ಹೊಸ ವರ್ಷಕೆ ಹೊಸ ಹರುಷವ ತರಲಿ. ಯುಗಾದಿ ಎಲ್ಲರ ಬಾಳಿನಲ್ಲೂ ಸುಖ ಶಾಂತಿ ನೆಮ್ಮದಿಯನ್ನು ತರಲಿ. ಶ್ರೀ ಕೃಷ್ಣ ಗೀತೆಯಲ್ಲಿ ಹೇಳಿದ ಹಾಗೆ "ಸುಖ ದುಖ್ಯೇಃ ಸಮೇಕೃತ್ವಾ ಲಾಭಾಲಭೌ ಜಯಾಜಯ" ಸುಖ ದುಃಖಗಳನ್ನು ಸಮನಾಗಿ ಸ್ವೀಕರಿಸಬೇಕು. ಹಾಗೆಯೇ ನಾವೆಲ್ಲ ಯುಗಾದಿಯ ದಿನದಂದು ಸಿಹಿ ಮತ್ತು ಕಹಿಯನ್ನು ಸಮನಾಗಿ ಹಂಚಿಕೊಳ್ಳುವ ಶಕ್ತಿಯನ್ನು ಭಗವಂತನು ಎಲ್ಲರಿಗೂ ದಯಪಾಲಿಸಲಿ ಎಂದು ಹಾರೈಸುತ್ತೇನೆ.

2013 ಸಹಕಾರಿ ಕ್ಷೇತ್ರದ ಪರಿವರ್ತನೆಯ ಕಾಲ. 2012ನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷವೆಂದು ಆಚರಿಸಿ ಮಹತ್ವದ ಬದಲಾವಣೆಗಳಿಗೆ ನಾಂದಿಯಾಗಿದೆ. 2012ನೇ ವರ್ಷ ಸಹಕಾರಿ ಕ್ಷೇತ್ರದ ಅಬಿವೃದ್ಧಿಯ ದೃಷ್ಟಾರನಂತೆ, ಸಹಕಾರ ಕ್ಷೇತ್ರದ ಸ್ವಾಯತ್ತತೆಗೆ, ಬೆಳವಣಿಗೆಗೆ, ಗುಣಮಟ್ಟದ ಸುಧಾರಣೆಗೆ ಪೂರಕವಾಗಿ ಕಾರ್ಯನಿರ್ವಹಿಸಿದೆ. ಈ ವರ್ಷವನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷವೆಂದು ಘೋಷಿಸಿ ಸಹಕಾರಿಗಳಿಗೆಲ್ಲ ಹೊಸ ಚೈತನ್ಯವನ್ನು ನೀಡಿರುವುದಕ್ಕಾಗಿ ವಿಶ್ವಸಂಸ್ಥೆ ಅಭಿನಂದನಾರ್ಹ.

ನಮ್ಮ ದೇಶದ ಸಂವಿಧಾನಕ್ಕೆ 97ನೇ ತಿದ್ದುಪಡಿಯಾಗಿ ಸಹಕಾರಿ ಕ್ಷೇತ್ರಕ್ಕೆ ಸಂವಿಧಾನಾತ್ಮಕ ಮಾನ್ಯತೆ ದೊರೆತಿದೆ. ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವುದು ಈ ದೇಶದ ಪ್ರಜೆಗಳ ಮೂಲಭೂತ ಹಕ್ಕು ಎಂದು ಈ ತಿದ್ದುಪಡಿ ಘೋಷಿಸಿದೆ. ಇದಕ್ಕನುಗುಣವಾಗಿ ರಾಜ್ಯದ 1959 ರ ಕಾಯ್ದೆ ಹಾಗೂ 1997ರ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗಳನ್ನು 2012 ರಲ್ಲಿ ರಾಜ್ಯ ಸರಕಾರ ಅಂಗೀಕರಿಸಿದೆ. ಈಗ ಬಾಕಿ ಇರುವುದು ಸಹಕಾರಿ ಸಂಸ್ಥೆಗಳ ಹಾಗೂ ಸಹಕಾರಿಗಳ ಮಹತ್ವದ ಜವಾಬ್ದಾರಿಯ ನಿರ್ವಹಣೆ.

2013 ನೇ ವರ್ಷ ಸಹಕಾರಿಗಳಿಗೆ ಹಾಗೂ ಸಹಕಾರಿ ಸಂಸ್ಥೆಗಳಿಗೆ ತಮ್ಮ ಕಾರ್ಯನಿರ್ವಹಣೆಯಲ್ಲಿ ಮಾರ್ಪಾಟುಗಳನ್ನು ಮಾಡಿ ಮುಂದೆ ಸಾಗಲು ದಿಕ್ಸೂಚಿಯಾಗಿರುವುದರಿಂದ ಪ್ರತಿಯೊಂದು ಸಹಕಾರಿಯು ಮುಂಬರುವ ದಿನಗಳಲ್ಲಿ ಸಮಗ್ರವಾಗಿ ತಮ್ಮ ಉಪವಿಧಿಗಳಲ್ಲಿ ತಿದ್ದುಪಡಿಮಾಡಿಕೊಳ್ಳಬೇಕಿದೆ. ಅದಕ್ಕಾಗಿ ಅವಶ್ಯಕವೆನಿಸಿದರೆ ವಿಶೇಷ ಮಹಾಸಭೆ ಅಥವಾ ವಾರ್ಷಿಕ ಸಾಮಾನ್ಯ ಸಭೆಯಲ್ಲಿಯೇ ಈ ತಿದ್ದುಪಡಿಗಳನ್ನು ಮಂಡಿಸಿ ಅನುಮೋದಿಸಿಕೊಳ್ಳಬೇಕಿದೆ. ಆಡಳಿತ ಮಂಡಳಿಯಲ್ಲಿ ಪರಿಣಿತರಿಗೆ ಅವಕಾಶ, ಸೆಪ್ಟಂಬರ್ 1ನೇ ದಿನಾಂಕದೊಳಗೆ ಕಡ್ಡಾಯವಾಗಿ ಲೆಕ್ಕಪರಿಶೋಧನೆ, ಸೆಪ್ಟಂಬರ್ 25 ದಿನಾಂಕದೊಳಗಾಗಿ ಸಾಮಾನ್ಯ ಸಭೆಯನ್ನು ಕಡ್ಡಾಯವಾಗಿ ಜರುಗಿಸುವುದು, ಸೆಪ್ಟಂಬರ್ 30 ದಿನಾಂಕದೊಳಗಾಗೆ ನಿಬಂಧಕರಿಗೆ ಮಾಹಿತಿಗಳನ್ನು ಕಡ್ಡಾಯವಾಗಿ ಕಳುಹಿಸುವುದು ನಿರ್ದೇಶಕರಿಗೆ ಹೆಚ್ಚಿನ ಜವಾಬ್ದಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ ಇತ್ಯಾದಿಗಳಿಂದ ಸಹಕಾರಿ ಕ್ಷೇತ್ರದ ಕಾರ್ಯಾಚರಣೆಯಲ್ಲಿ ಮಹತ್ವದ ಬದಲಾವಣೆಗಳನ್ನು ಕಾಣಬಹುದು.

ಸಹಕಾರಿ ಕ್ಷೇತ್ರ ಈ ದೇಶದ ಜನರ ಜೀವನದ ಪದ್ಧತಿಯಾಗಿ ಬೆಳೆದು ಬಂದಿರುವುದರಿಂದ ಶತಮಾನದ ಇತಿಹಾಸವಿರುವ ಈ ಸಹಕಾರಿ ಚಳುವಳಿ ಈ ದೇಶದ ಜನರ ಆರ್ಥಿಕ ಅಭಿವೃದ್ಧಿಯ ಹರಿಕಾರನಾಗಿರುವುದರಿಂದ ಈ ಎಲ್ಲ ಸೂಚಿತ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಸಹಕಾರಿಗಳ ಮುಖ್ಯ ಕರ್ತವ್ಯವಾಗಿದೆ ಎಂದು ನಾನು ಭಾವಿಸಿದ್ದೇನೆ. ಸಂಯುಕ್ತ ಸಹಕಾರಿಯು ಇದೆ ಉದ್ದೇಶಗಳಿಗಾಗಿ ಹಮ್ಮಿಕೊಂಡಿರುವ ರಾಜ್ಯದ 33 ತರಬೇತಿ ಕಾರ್ಯಕ್ರಮಗಳಲ್ಲಿ ಎಲ್ಲಾ ಸಹಕಾರಿಗಳು ಸಕ್ರಿಯವಾಗಿ ಭಾಗವಹಿಸಿ ಪರಿವರ್ತನೆಯ ಅಭಿಯಾನದಲ್ಲಿ ಪಾಲ್ಗೊಂಡು ಪ್ರಯೋಜನ ಪಡೆದುಕೊಳ್ಳಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

– ಎಸ್.ಆರ್. ಸತೀಶಚಂದ್ರ

ಸಂಪಾದಕೀಯ

97ನೇ ಸಂವಿಧಾನ ಹಾಗೂ ಸಹಕಾರಿ ಕಾಯ್ದೆ ತಿದ್ದುಪಡಿಯಿಂದಾಗಿ ಸಹಕಾರಿಗಳಿಗೆ ಹೆಚ್ಚಿದ ಜವಾಬ್ದಾರಿ

ಸಹಕಾರಿ ಬಂಧುಗಳಿಗೆಲ್ಲಾ ಹೊಸ ಆರ್ಥಿಕ ವರ್ಷದ ಹಾಗೂ ಯುಗಾದಿ ಹಬ್ಬದ ಶುಭಾಷಯಗಳು. ದೇಶದ ಸಹಕಾರಿ ಚಳುವಳಿಗೆ 108 ವರ್ಷಗಳು ಕಳೆದ ಸಂದರ್ಭದಲ್ಲಿ 12 ಜನವರಿ 2013 ಸ್ವಾಮಿ ವಿವೇಕಾನಂದರ ಜನ್ಮದಿನದಂದು 97ನೇ ಸಂವಿಧಾನ ತಿದ್ದುಪಡಿ ಅನುಮೋದನೆಯಾಗಿರುವುದು ದೇಶದ ಸಹಕಾರಿಗಳಿಗೆ ಸಂತೋಷವನ್ನು ತರುವುದರ ಜೊತೆಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಟ್ಟಿದೆ. ಯಾರು ನೀರಿಕ್ಷಿಸದ ಸಮಯದಲ್ಲಿ ಮಾನ್ಯ ಕೇಂದ್ರ ಸಚಿವರಾದ ಶ್ರೀ ಶರದ್ ಪವಾರ್‌ರವರು ಸಂವಿಧಾನಕ್ಕೆ 97ನೇ ತಿದ್ದುಪಡಿಯನ್ನು ಮಾಡಿ ಸಹಕಾರಿ ಕ್ಷೇತ್ರಕ್ಕೆ ಶಕ್ತಿಯನ್ನು ಹಾಗೂ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸುವುದು/ಹುಟ್ಟುಹಾಕುವುದು ಸಂವಿಧಾನಾತ್ಮಕ ಹಕ್ಕಾಗಿ ನೀಡಿರುವುದು ಸಹಕಾರಿಗಳಿಗೆ ಸಂತೋಷದ ವಿಷಯ.

ಸ್ವಇಚ್ಛಾ ರಚನೆ, ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ ಮತ್ತು ಸ್ವಾಯತ್ತ ಕಾರ್ಯಾಚರಣೆ ತತ್ವಗಳ ಆಧಾರದ ಮೇಲೆ ಸಹಕಾರಿ ಸಂಸ್ಥೆಗಳು ಸಂಘಟಿಸಲ್ಪಟ್ಟಿರುತ್ತದೆ. ವಿಶೇಷವಾಗಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಅತ್ಯಂತ ಮಹತ್ವದ ಹೆಜ್ಜೆ. ಸದಸ್ಯರು ಸಹಕಾರಿ ಸಂಸ್ಥೆಗಳ ಪ್ರತಿಯೊಂದು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ಸಹಕಾರಿ ಸಂಸ್ಥೆಗಳು ಉತ್ತಮ, ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಲು ಸಾಧ್ಯ. ಸದಸ್ಯರ ಜೊತೆಗೆ ಆಡಳಿತ ಮಂಡಳಿಯವರು ಹಾಗೂ ಮುಖ್ಯ ಕಾರ್ಯನಿರ್ವಾಹಕನು ಸಹ ಅಷ್ಟೇ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಅಗತ್ಯವೆನಿಸಿ ಅವರಿಗೂ ಸಹ ಹೆಚ್ಚಿನ ಜವಾಬ್ದಾರಿಗಳನ್ನು ಈ ತಿದ್ದುಪಡಿಗಳ ಮೂಲಕ ವಹಿಸಲಾಗಿದೆ.

ಏಪ್ರಿಲ್ 30ರೊಳಗಾಗಿ ಆಡಳಿತ ಮಂಡಳಿಯು ಸಹಕಾರ ವರ್ಷಾಂತ್ಯಕ್ಕೆ ಇದ್ದ ಆರ್ಥಿಕ ತಃಖ್ತೆಗಳು ಮತ್ತು ಅಥಾವೆ ಪತ್ರಿಕೆಗಳನ್ನು ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಗೆ ಲೆಕ್ಕಪರಿಶೋಧನೆಗಾಗಿ ನೀಡುವುದು, ಸೆಪ್ಟೆಂಬರ್ ಒಂದರೊಳಗಾಗಿ ಲೆಕ್ಕಪರಿಶೋಧನೆ ಮಾಡಿಸುವುದು, ಕಡ್ಡಾಯವಾಗಿ ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್ 25ರೊಳಗಾಗಿ ಜರುಗಿಸುವುದು, ಸೆಪ್ಟೆಂಬರ್ 30ರೊಳಗಾಗಿ ಸಂಯುಕ್ತ ಸಹಕಾರಿ ಹಾಗೂ ನಿಬಂಧಕರಿಗೆ ವಾರ್ಷಿಕ ಮಾಹಿತಿಗಳನ್ನು ಒದಗಿಸುವುದು, ಆಡಳಿತ ಸಮಿತಿ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರಿ ಚುನಾವಣಾ ಆಯೋಗದಿಂದ ವ್ಯವಸ್ಥಿತವಾಗಿ ನಿರ್ವಹಿಸುವುದು ಇತ್ಯಾದಿಗಳಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸುವಂತೆ ಮಾಡಿದೆ. ಜವಾಬ್ದಾರಿಗಳ ಯಶಸ್ವಿ ನಿರ್ವಹಣೆಯಿಂದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯ. ಈ ಪ್ರಕ್ರಿಯೆಯಲ್ಲಿ ಎಲ್ಲರು ಸಕ್ರಿಯವಾಗಿ ಭಾಗವಹಿಸೋಣ, ಸಹಕಾರಿ ಚಳುವಳಿಯನ್ನು ಬೆಳೆಸೋಣ, ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳೋಣ.

– **ಸಂಪಾದಕರು**

ಒ ಳ ಪು ಟ ಗ ಳ ಲ್ಲಿ...

ಉಪವಿಧಿಗಳ ತಿದ್ದುಪಡಿ ತರಬೇತಿ ಅಭಿಯಾನಕ್ಕೆ ನಿಬಂಧಕರಾದ ಶ್ರೀ ಎನ್.ಎಸ್.ಚನ್ನಪ್ಪಗೌಡ ಇವರಿಂದ ಚಾಲನೆ 4
ಸಹಕಾರ ಕ್ಷೇತ್ರಕ್ಕೆ ಉಜ್ವಲ ಭವಿಷ್ಯ – ಶ್ರೀ ಆರ್.ಎಸ್.ಹುಚ್ಚಾಚಾರಿ 5

ಸೌಹಾರ್ದ ಸಹಕಾರಿಗಳಿಗಾಗಿ ಉಪವಿಧಿ ತಿದ್ದುಪಡಿ ಕಾರ್ಯಾಗಾರ
ಗುಲ್ಬರ್ಗ ವಿಭಾಗ 6
ಮೈಸೂರು ವಿಭಾಗ 8–9
ತರಬೇತಿ ಅಭಿಯಾನ ಛಾಯಾಚಿತ್ರಗಳು 10
ಬೆಳಗಾವಿ ವಿಭಾಗ 11
ಸಂಪನ್ಮೂಲಗಳನ್ನು ಜಾಗೃತಿಯಿಂದ ಕ್ರೋಢಿಕರಿಸಿ ಭವಿಷ್ಯದಲ್ಲಿ ಸ್ಪರ್ಧೆಯನ್ನು ಎದುರಿಸಿ ಸದೃಢ ಹೊಂದಲು ಕರೆ 12
ವೆಬ್‌ಸೈಟ್ ಪರಿಚಯ ಮಾಲಿಕೆ 13
ಪ್ರಶ್ನೋತ್ತರ 14
ಲೇಖನ 17
"ಪತ್ತಿನ ಸಹಕಾರಿ/ ಸಹಕಾರ ಸಂಘಗಳಿಗೆ ಸಿಹಿ ಸುದ್ದಿ" 18
ಲೇಖನ 19
ಜಾಹೀರಾತು 20

97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ತರಬೇತಿ ಅಭಿಯಾನ

97ನೇ ಸಂವಿಧಾನ ತಿದ್ದುಪಡಿಯಾದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಸೌಹಾರ್ದ ಸಹಕಾರಿ ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಾಡಲಾಗಿದೆ. ಈ ಹಿನ್ನಲೆಯಲ್ಲಿ ಈ ಕಾಯ್ದೆಯಡಿಯಲ್ಲಿ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರ ಸಂಸ್ಥೆಗಳು ತಮ್ಮ ಉಪವಿಧಿಗಳನ್ನು ತಿದ್ದುಪಡಿ ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಈ ಬಗ್ಗೆ ಸೌಹಾರ್ದ ಸಹಕಾರ ಸಂಸ್ಥೆಗಳಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಏಪ್ರಿಲ್ 03 ರಿಂದ 18ರವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ಮೂರು ಹಂತಗಳಲ್ಲಿ ಒಟ್ಟೂ 33 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಮೊದಲ ಹಂತದಲ್ಲಿ ಏಪ್ರಿಲ್ 03, 04, 05, 06ರಂದು ಒಟ್ಟೂ 17 ಕಾರ್ಯಕ್ರಮಗಳು ನಡೆದಿರುತ್ತವೆ.

ಉಪವಿಧಿಗಳ ತಿದ್ದುಪಡಿ ತರಬೇತಿ ಅಭಿಯಾನಕ್ಕೆ ನಿಬಂಧಕರಾದ ಶ್ರೀ ಎನ್.ಎಸ್.ಚನ್ನಪ್ಪಗೌಡರಿಂದ ಚಾಲನೆ

ಬಂಡವಾಳಶಾಹಿಗಳ ಶೋಷಣೆ ತಪ್ಪಿಸಲು ಸಹಕಾರಿ ಸಂಸ್ಥೆಗಳು ಸದೃಢವಾಗಲು ಕರೆ

ಬೆಂಗಳೂರು ವಿಭಾಗ – ದಿನಾಂಕ : 03 ಏಪ್ರಿಲ್ 2013 : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಬೆಂಗಳೂರು ನಗರದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವ ಹಣಾಧಿಕಾರಿಗಳಿಗಾಗಿ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಾಗಾರವನ್ನು ದಿನಾಂಕ 03 ಏಪ್ರಿಲ್ 2013ರಂದು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಮಾನ್ಯ ಸಹಕಾರಿಗಳ ನಿಬಂಧಕರಾದ ಶ್ರೀ ಎನ್. ಎಸ್.ಚನ್ನಪ್ಪಗೌಡ, ಐ.ಎ.ಎಸ್., ಇವರು ಉದ್ಘಾಟಿಸಿ ಮಾತನಾಡುತ್ತಾ ವೇಗವಾಗಿ ಬದಲಾವಣೆ ಕಾಣುತ್ತಿರುವ ಇಂದಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ತರಬೇತಿ ಅತ್ಯವಶ್ಯಕವೂ ಅಮೂಲ್ಯವೂ ಆಗಿದೆ, ಸೌಹಾರ್ದ ಸಹಕಾರಿಗಳು ಚುರುಕಾಗಿ ಕಾರ್ಯನಿರ್ವಹಿಸುತ್ತ ಬಲಿಷ್ಠವಾಗಿ ಬೆಳೆಯಬೇಕು. 1959ರ ಕಾಯ್ದೆಯಲ್ಲಿ 36000 ಕ್ಕೂ ಹೆಚ್ಚು ಸಂಸ್ಥೆಗಳು ಹಾಗೂ ಸೌಹಾರ್ದ ಸಹಕಾರ ಕಾಯ್ದೆಯಲ್ಲಿ 2400ಕ್ಕೂ ಹೆಚ್ಚು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದರೂ ಸಹ ಜನಸಾಮಾನ್ಯರಿಗೆ ಬಂಡವಾಳಶಾಹಿ ಶೋಷಣೆ ಕಡಿಮೆಯಾಗಿಲ್ಲ. ಈ ಹಿನ್ನಲೆಯಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಇನ್ನೂ ಹೆಚ್ಚಬೇಕು, ಆದರೆ ಇದೇ ಸಂದರ್ಭದಲ್ಲಿ ಸ್ವಾಯತ್ತತೆ ಸ್ವೇಚ್ಛಾಚಾರವಾಗದಂತೆಯೂ ಎಚ್ಚರವಹಿಸಬೇಕು ಎಂದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಆರ್.ಎಸ್. ಹುಚ್ಚಾಚಾರಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ವಹಿಸಿದ್ದರು. ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಹೆಚ್.ಎಸ್. ನಾಗರಾಜಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್.ಸತೀಶ್‌ಚಂದ್ರ, ಬೆಂಗಳೂರು ಜಿಲ್ಲಾ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನ ಉಪಸ್ಥಿತರಿದ್ದರು. 47 ಸೌಹಾರ್ದ ಸಹಕಾರಿಗಳಿಂದ 65 ಪ್ರತಿನಿಧಿಗಳು ಭಾಗವಹಿಸಿ ಈ ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು.

ಸ್ವಾತಂತ್ರ್ಯದಿಂದ ಜವಾಬ್ದಾರಿಯೂ ಹೆಚ್ಚಿದೆ - ಶ್ರೀ ಜಿ.ಕರಿಬಸಪ್ಪ, ಲೆಕ್ಕಪರಿಶೋಧನಾ ನಿರ್ದೇಶಕರು

ದಿನಾಂಕ – 05 ಏಪ್ರಿಲ್ 2013 : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ದಿನಾಂಕ: 05 ಏಪ್ರಿಲ್ 2013ರಂದು ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು ಇಲ್ಲಿ ಉಪವಿಧಿ ತಿದ್ದುಪಡಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಜಿ.ಕರಿಬಸಪ್ಪ, ಕೆ.ಸಿ.ಎಸ್., ಮಾನ್ಯ ಲೆಕ್ಕಪರಿಶೋಧನಾ ನಿರ್ದೇ ಶಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಉದ್ಘಾಟಿಸಿ ಮಾತನಾಡುತ್ತ ಗುಣಾತ್ಮಕ ಕಾರ್ಯನಿರ್ವಹಣೆಗೆ ತರಬೇತಿ ಅತ್ಯಗತ್ಯ, ತಿದ್ದುಪಡಿಯಿಂದ ದೊರಕಿದ ಸ್ವಾತಂತ್ರ್ಯದಿಂದಾಗಿ ಜವಾಬ್ದಾರಿಯೂ ಹೆಚ್ಚಿದಂತಾಗಿದೆ, ಉದ್ದೇಶಪೂರ್ವಕ ಉಲ್ಲಂಘನೆಗಳಿಗೆ ಶಿಕ್ಷೆಯಿದೆ, ವೃತ್ತೀಕೃತ ಆಡಳಿತ ನಿರ್ವಹಣೆಯಿಂದ ಸಹಕಾರ ಕ್ಷೇತ್ರವೂ ಅಭಿವೃದ್ಧಿಯತ್ತ ನಡೆಯಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಆರ್.ಎಸ್.ಹುಚ್ಚಾಚಾರಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ವಹಿಸಿದ್ದರು. ಪ್ರಾಸ್ತಾವಿಕ ಮತ್ತು ಸ್ವಾಗತವನ್ನು ಶ್ರೀ ಶರಣಗೌಡ.ಜಿ.ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಕರಾಸೌಸಂಸನಿ., ಬೆಂಗಳೂರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ರಾಮನಗರ ಜಿಲ್ಲಾ ನಿರ್ದೇಶಕರಾದ ಶ್ರೀ ಆಂಜನೇಯ ಗುಪ್ತ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ ಕುಮಾರ್, ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನ, ಹಾಗೂ ಬೆಂಗಳೂರು ವಿಭಾಗಾಧಿಕಾರಿಯಾದ ಶ್ರೀ ರಘುನಂದನ್‌ರವರು ಉಪಸ್ಥಿತರಿದ್ದರು. 48 ಸೌಹಾರ್ದ ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿ ಈ ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು.

ಮೂರು ದಿನಗಳ ಬೆಂಗಳೂರಿನ ಕಾರ್ಯಾಗಾರದ ಅವಧಿಯಲ್ಲಿ "ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು" ಹಾಗೂ "ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು" ವಿಷಯಗಳಿಗೆ ಸಂಬಂಧಿಸಿದಂತೆ ಶ್ರೀ ಆರ್.ಎಸ್.ಹುಚ್ಚಾಚಾರಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಶ್ರೀ ಹೆಚ್.ಎಸ್.ನಾಗರಾಜಯ್ಯ, ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಕಾನೂನು ಕೋಶ, ಬೆಂಗಳೂರು, ಶ್ರೀ ಶಶಿಧರ ಎಲೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಮಂಡ್ಯ, ಶ್ರೀ ವೈ.ಕುಮಾರ್, ಕರಾಸೌಸಂಸನಿ., ಬೆಂಗಳೂರು ಇವರುಗಳು ಉಪನ್ಯಾಸಗಳನ್ನು ನೀಡಿದರು.

ಸಹಕಾರ ಕ್ಷೇತ್ರಕ್ಕೆ ಉಜ್ವಲ ಭವಿಷ್ಯ - ಶ್ರೀ ಆರ್.ಎಸ್.ಹುಚ್ಚಾಚಾರಿ

ದಿನಾಂಕ – 04 ಏಪ್ರಿಲ್ 2013 : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಬೆಂಗಳೂರು ನಗರದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗಾಗಿ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಾಗಾರವನ್ನು ದಿನಾಂಕ 04 ಏಪ್ರಿಲ್ 2013ರಂದು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಆರ್ ಎಸ್ ಹುಚ್ಚಾಚಾರಿ, ಮಾನ್ಯ ಅಪರ ನಿಬಂಧಕರು(ನಿವೃತ್ತ) ಇವರು ಉದ್ಘಾಟಿಸಿ ಮಾತನಾಡುತ್ತಾ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾಡಲ್ಪಟ್ಟ ಸಂವಿಧಾನ ತಿದ್ದುಪಡಿಯಿಂದಾಗಿ ಸಹಕಾರ ಕ್ಷೇತ್ರ ಉಜ್ವಲವಾಗಿ ಬೆಳೆಯುವಂತಾಗಬೇಕು ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಹೆಚ್ ಎಸ್ ನಾಗರಾಜಯ್ಯ ಮಾತನಾಡುತ್ತ 97ನೇ ಸಂವಿಧಾನ ತಿದ್ದುಪಡಿ ಸಹಕಾರ ಕ್ಷೇತ್ರಕ್ಕೆ ಮೂಲಭೂತ ಹಕ್ಕು, ಪ್ರಜಾಪ್ರಭುತ್ವ ಆಡಳಿತ, ಕ್ರಿಯಾಶೀಲ ಸದಸ್ಯತ್ವ, ಸ್ವಾಯತ್ತತೆ ಹಾಗೂ ವೃತ್ತಿಪರತೆಯ ಪಂಚಸೂತ್ರಗಳನ್ನು ನೀಡಿದೆ, ಸಹಕಾರ ಕ್ಷೇತ್ರದ ಉಳಿವಿಗಾಗಿ ಏಳ್ಗೆಗಾಗಿ ಸೌಹಾರ್ದ ಸಹಕಾರಿಗಳು ಶ್ರಮಿಸಬೇಕಿದೆ ಎಂದರು.

ಕಾರ್ಯಕ್ರಮದ ಪ್ರಾಸ್ತಾವಿಕ ಮತ್ತು ಸ್ವಾಗತವನ್ನು ಶ್ರೀ ವೈ. ಕುಮಾರ್, ಉಪಪ್ರಧಾನ ವ್ಯವಸ್ಥಾಪಕರು, ಕರೌಸಂಸನಿ., ಬೆಂಗಳೂರು ಇವರು ನಡೆಸಿಕೊಟ್ಟರು ಹಾಗೂ ಶ್ರೀ ವಿ.ಜೆ.ಕಾರಕೂನ, ತರಬೇತಿ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು ಇವರು ವಂದಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಬೆಂಗಳೂರು ಜಿಲ್ಲಾ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನ ಹಾಗೂ ಬೆಂಗಳೂರು ವಿಭಾಗಾಧಿಕಾರಿಯಾದ ಶ್ರೀ ರಘುನಂದನ್‌ರವರು ಉಪಸ್ಥಿತರಿದ್ದರು. 42 ಸೌಹಾರ್ದ ಸಹಕಾರಿಗಳಿಂದ 54 ಪ್ರತಿನಿಧಿಗಳು ಭಾಗವಹಿಸಿ ಈ ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು.

ಶಿವಮೊಗ್ಗ ಹಾಗೂ ಚಿಕ್ಕಮಗಳೂರಿನ ಸೌಹಾರ್ದ ಸಹಕಾರಿಗಳಿಗಾಗಿ ಉಪವಿಧಿ ತಿದ್ದುಪಡಿ ಕಾರ್ಯಾಗಾರ

ದಿನಾಂಕ – 06 ಏಪ್ರಿಲ್ 2013 : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗಾಗಿ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಾಗಾರವನ್ನು ದಿನಾಂಕ:06 ಏಪ್ರಿಲ್ 2013ರಂದು ಹೋಟೆಲ್ ಮಥುರಾ ಪ್ಯಾರಡೈಸ್, ಶಿವಮೊಗ್ಗದಲ್ಲಿ ಆಯೋಜಿಸಲಾಗಿತ್ತು. ಶ್ರೀ ಎಂ.ಜಿ.ನಾಗಭೂಷಣ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಶಿವಮೊಗ್ಗ ಇವರು ಕಾರ್ಯಕ್ರಮದ ಉದ್ಘಾಟನೆಯನ್ನು ನಡೆಸಿ ಮಾತನಾಡುತ್ತ ತಿದ್ದುಪಡಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರ ಸಂಸ್ಥೆಗಳಿಗೆ ಅರಿವು ಮೂಡಿಸುವ ತರಬೇತಿಯನ್ನು ದೊಡ್ಡ ಪ್ರಮಾಣದಲ್ಲಿ ಜಿಲ್ಲಾವಾರು ಆಯೋಜಿಸುತ್ತಿರುವ ಕಾರ್ಯ ಶ್ಲಾಘನೀಯವಾದದ್ದು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜೆ ಸಿ ಜನಾರ್ದನ, ಲೆಕ್ಕಪರಿಶೋಧನಾ ಉಪನಿರ್ದೇಶಕರು, ಶಿವಮೊಗ್ಗ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎನ್.ರವಿ, ಮಾನ್ಯ ಪ್ರಾಂಶುಪಾಲರು, ಕೆಐಸಿಎಂ, ಶಿವಮೊಗ್ಗ ಹಾಗೂ ಶ್ರೀ ಚಂದ್ರಶೇಖರ ಕರಿಯಪ್ಪ, ಮುಕಾನಿ., ಜಿಲ್ಲಾ ಸಹಕಾರಿ ಯೂನಿಯನ್, ಶಿವಮೊಗ್ಗ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ಮತ್ತು ಸ್ವಾಗತವನ್ನು ಶ್ರೀ ರಘುನಂದನ್, ಬೆಂಗಳೂರು ವಿಭಾಗಾಧಿಕಾರಿ ಹಾಗೂ ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ರವಿಕುಮಾರ್‌ರವರು ನಡೆಸಿಕೊಟ್ಟರು.

ಕಾರ್ಯಾಗಾರದ ಅವಧಿಯಲ್ಲಿ "ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು" ವಿಷಯವನ್ನು ಶ್ರೀ ಬಿ.ಎ.ಮಹದೇವಪ್ಪ, ಅಪರ ನಿಬಂಧಕರು(ನಿವೃತ್ತ) ಹಾಗೂ "ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು" ವಿಷಯವನ್ನು ಶ್ರೀ ಬಿ.ವಿ.ರವೀಂದ್ರನಾಥ್, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ನಡೆಸಿಕೊಟ್ಟರು. ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ 76 ಸೌಹಾರ್ದ ಸಹಕಾರಿಗಳಿಂದ 98 ಪ್ರತಿನಿಧಿಗಳು ಹಾಗೂ 18 ಸಹಕಾರ ಸಂಘಗಳ ಪ್ರತಿನಿಧಿಗಳು ಸೇರಿದಂತೆ ಒಟ್ಟು 116 ಪ್ರತಿನಿಧಿಗಳು ಭಾಗವಹಿಸಿ ಈ ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು.

ಗುಲಬರ್ಗಾ ವಿಭಾಗ ಸೌಹಾರ್ದ ಸಹಕಾರಿಗಳಿಗಾಗಿ ಉಪವಿಧಿ ತಿದ್ದುಪಡಿ ಕಾರ್ಯಾಗಾರ

ಬೀದರ್ ಜಿಲ್ಲೆಯ ಕಾರ್ಯಾಗಾರದ ಉದ್ಘಾಟನೆ

ದಿನಾಂಕ – 03 ಏಪ್ರಿಲ್ 2013, ಬೀದರ

ಬೀದರ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ 97ನೇ ಸಂವಿಧಾನದ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಾಗಾರವನ್ನು ದಿನಾಂಕ: 03–04–2013, ಬುಧವಾರ ರಂದು 'ಕೃಷ್ಣ ರೇಸಿಡೆನ್ಸಿ, ಬೀದರ' ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಮಹಮ್ಮದ್ ಜಾಫರ್, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಬೀದರ ಇವರು ಆಗಮಿಸಿ, ಉದ್ಘಾಟನೆಯನ್ನು ನೆರವೇರಿಸಿದರು.

ನಂತರ ತರಬೇತಿ ಕಾರ್ಯಾಗಾರದಲ್ಲಿ ಮೊದಲಿಗೆ 'ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು', ಎಂಬ ವಿಷಯದ ಬಗ್ಗೆ ಶ್ರೀ ಗುರುನಾಥ ಜ್ಯಾಂತೀಕರ್, ವಕೀಲರು, ಬೀದರ ಮತ್ತು ಶ್ರೀ ವಿರೇಶ್ ಹಿರೇಮಠ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇವರು ಉಪನ್ಯಾಸ ನೀಡಿದರು. ನಂತರ ಎರಡನೇ ಅವಧಿಯಲ್ಲಿ 'ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು', ಈ ವಿಷಯದ ಬಗ್ಗೆ ಶ್ರೀ ಬಿ. ರಾಜಶೇಖರ್, ಅಧ್ಯಕ್ಷರು, ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಇವರು ಉಪನ್ಯಾಸ ನೀಡಿದರು. ಈ ತರಬೇತಿ ಕಾರ್ಯಾಗಾರದಲ್ಲಿ ಬೀದರ ಜಿಲ್ಲೆಯ 53 ಸೌಹಾರ್ದ ಸಹಕಾರಿಗಳಿಂದ ಮು.ಕಾ.ನಿ, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಸೇರಿದಂತೆ 70 ಕ್ಕೂ ಹೆಚ್ಚು ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅತಿಥಿಗಳನ್ನು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ಸ್ವಾಗತಿಸಿ ವಂದಿಸಿದರು.

ದಿನಾಂಕ – 03 ಏಪ್ರಿಲ್ 2013, ಬಳ್ಳಾರಿ

ಬಳ್ಳಾರಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ 97ನೇ ಸಂವಿಧಾನದ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಾಗಾರವನ್ನು ದಿನಾಂಕ – 03–04–2013, ಬುಧವಾರ ರಂದು 'ಸಿದ್ಧಾರ್ಥ ರೇಸಿಡೆನ್ಸಿ, ಹೊಸಪೇಟೆ' ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಜಿ. ಉಮೇಶ್, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಹೊಸಪೇಟೆ ಇವರು ಆಗಮಿಸಿ, ಉದ್ಘಾಟನೆಯನ್ನು ನೆರವೇರಿಸಿದರು. ನಂತರ ತರಬೇತಿ ಕಾರ್ಯಾಗಾರದಲ್ಲಿ ಮೊದಲಿಗೆ 'ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು', ಎಂಬ ವಿಷಯದ ಬಗ್ಗೆ

ಶ್ರೀ ಶ್ರೀಕಾಂತ್ ಬರುವೆ, ಸಹಾಯಕ ಉಪ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪನ್ಯಾಸ ನೀಡಿದರು. ನಂತರ ಎರಡನೇ ಅವಧಿಯಲ್ಲಿ 'ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು', ಈ ವಿಷಯದ ಬಗ್ಗೆ ಶ್ರೀ ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕ ಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು. ನಂತರ ಸಂಜೆ ಈ ತರಬೇತಿ ಕಾರ್ಯಗಾರದಲ್ಲಿ ಬಳ್ಳಾರಿ ಜಿಲ್ಲೆಯ 55 ಸೌಹಾರ್ದ ಸಹಕಾರಿಗಳಿಂದ ಮು.ಕಾ.ನಿ, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಸೇರಿದಂತೆ 75 ಕ್ಕೂ ಹೆಚ್ಚು ಜನ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಕಾರ್ಯಕ್ರಮದ ಅತಿಥಿಗಳನ್ನು ಶ್ರೀ ರಾಜಶೇಖರ್. ಹೆಚ್, ಕಿರಿಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ಸ್ವಾಗತಿಸಿ ವಂದಿಸಿದರು.

ದಿನಾಂಕ : 04 ಏಪ್ರಿಲ್ 2013, ಗುಲ್ಬರ್ಗಾ ಮತ್ತು ಯಾದಗಿರಿ

ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ 97ನೇ ಸಂವಿಧಾನದ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಗಾರವನ್ನು ದಿನಾಂಕ:04-04-2013, ಗುರುವಾರ ರಂದು 'ಗುಡಲಕ್ ಹೋಟೆಲ್, ಗುಲಬರ್ಗಾ' ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ವಿಶ್ವನಾಥ ಮಲಕೂಡ, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಗುಲಬರ್ಗಾ ಇವರು ಆಗಮಿಸಿ, ಉದ್ಘಾಟನೆಯನ್ನು ನೆರವೇರಿಸಿದರು.

ನಂತರ ತರಬೇತಿ ಕಾರ್ಯಗಾರದಲ್ಲಿ ಮೊದಲಿಗೆ 'ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು', ಎಂಬ ವಿಷಯದ ಬಗ್ಗೆ ಶ್ರೀ ಗುರುನಾಥ ಜ್ಯಾಂತೀಕರ್, ವಕೀಲರು, ಬೀದರ ಮತ್ತು ಶ್ರೀ ಬಿ. ರಾಜಶೇಖರ್, ಅಧ್ಯಕ್ಷರು, ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಇವರು ಉಪನ್ಯಾಸ ನೀಡಿದರು. ನಂತರ ಎರಡನೇ ಅವಧಿಯಲ್ಲಿ 'ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು', ಈ ವಿಷಯದ ಬಗ್ಗೆ ಶ್ರೀ ಬಿ. ವಿ. ರವೀಂದ್ರನಾಥ್, ಸನ್ನದು ಲೆಕ್ಕ ಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು. ಈ ತರಬೇತಿ ಕಾರ್ಯಗಾರದಲ್ಲಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ 80 ಸೌಹಾರ್ದ ಸಹಕಾರಿಗಳಿಂದ ಮು. ಕಾ.ನಿ, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಸೇರಿದಂತೆ 105 ಕ್ಕೂ ಹೆಚ್ಚು ಜನ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಕಾರ್ಯಕ್ರಮದ ಅತಿಥಿಗಳನ್ನು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ಸ್ವಾಗತಿಸಿ ನಿರೂಪಿಸಿದರೆ, ಶ್ರೀ ರಾಜಶೇಖರ್. ಹೆಚ್, ಕಿರಿಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ವಂದಿಸಿದರು.

ದಿನಾಂಕ : 05 ಏಪ್ರಿಲ್ 2013, ರಾಯಚೂರು

ರಾಯಚೂರು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ 97ನೇ ಸಂವಿಧಾನದ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಗಾರವನ್ನು ದಿನಾಂಕ: 05-04-2013, ಶುಕ್ರವಾರ ರಂದು 'ಲಕ್ಷ್ಮೀ ರೇಸಿಡೆನ್ಸಿ, ಸಿಂಧನೂರು' ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಎಸ್.ಬಿ. ಅಮೀನ್ ಗಡ, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಸಿಂಧನೂರು ಇವರು ಆಗಮಿಸಿ, ಉದ್ಘಾಟನೆಯನ್ನು ನೆರವೇರಿಸಿದರು.

ನಂತರ ತರಬೇತಿ ಕಾರ್ಯಗಾರದಲ್ಲಿ ಮೊದಲಿಗೆ 'ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು', ಎಂಬ ವಿಷಯದ ಬಗ್ಗೆ ಶ್ರೀ ಶ್ರೀಕಾಂತ್ ಬರುವೆ, ಸಹಾಯಕ ಉಪ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಮತ್ತು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ಉಪನ್ಯಾಸ ನೀಡಿದರು. ನಂತರ ಎರಡನೇ ಅವಧಿಯಲ್ಲಿ 'ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು', ಈ ವಿಷಯದ ಬಗ್ಗೆ ಶ್ರೀ ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕ ಪರಿಶೋಧಕರು, ಸಾಗರ ಇವರು ಉಪನ್ಯಾಸ ನೀಡಿದರು. ಈ ತರಬೇತಿ ಕಾರ್ಯಗಾರದಲ್ಲಿ ರಾಯಚೂರು ಜಿಲ್ಲೆಯ 72 ಸೌಹಾರ್ದ ಸಹಕಾರಿಗಳಿಂದ ಮು.ಕಾ.ನಿ, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಸೇರಿದಂತೆ 100ಕ್ಕೂ ಹೆಚ್ಚು ಜನ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಕಾರ್ಯಕ್ರಮದ ಅತಿಥಿಗಳನ್ನು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ಸ್ವಾಗತಿಸಿ ನಿರೂಪಿಸಿದರೆ, ಶ್ರೀ ರಾಜಶೇಖರ್. ಹೆಚ್, ಕಿರಿಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ವಂದಿಸಿದರು.

ದಿನಾಂಕ : 06 ಏಪ್ರಿಲ್ 2013, ಕೊಪ್ಪಳ

ಕೊಪ್ಪಳ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ 97ನೇ ಸಂವಿಧಾನದ ತಿದ್ದುಪಡಿಗನುಗುಣವಾಗಿ "ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ" ಕಾರ್ಯಗಾರವನ್ನು ದಿನಾಂಕ: 06-04-2013, ಶನಿವಾರ ರಂದು 'ಐ.ಎಂ.ಎ, ಹಾಲ್, ಗಂಗಾವತಿ' ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಕೆ. ಮುನಿಯಪ್ಪ, ಮಾನ್ಯ ಸಹಕಾರಿಗಳ ಉಪ ನಿಬಂಧಕರು, ಕೊಪ್ಪಳ ಇವರು ಆಗಮಿಸಿ, ಉದ್ಘಾಟನೆಯನ್ನು ನೆರವೇರಿಸಿದರು.

ನಂತರ ತರಬೇತಿ ಕಾರ್ಯಗಾರದಲ್ಲಿ ಮೊದಲಿಗೆ 'ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿ ಮತ್ತು ಅವುಗಳ ಪರಿಣಾಮಗಳು', ಎಂಬ ವಿಷಯದ ಬಗ್ಗೆ ಶ್ರೀ ವಿರೇಶ್ ಹಿರೇಮಠ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇವರು ಉಪನ್ಯಾಸ ನೀಡಿದರು. ನಂತರ ಎರಡನೇ ಅವಧಿಯಲ್ಲಿ 'ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು', ಈ ವಿಷಯದ ಬಗ್ಗೆ ಶ್ರೀ ಶ್ರೀಕಾಂತ್ ಬರುವೆ, ಸಹಾಯಕ ಉಪ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪನ್ಯಾಸ ನೀಡಿದರು.

ಈ ತರಬೇತಿ ಕಾರ್ಯಗಾರದಲ್ಲಿ ಕೊಪ್ಪಳ ಜಿಲ್ಲೆಯ 85 ಸೌಹಾರ್ದ ಸಹಕಾರಿಗಳಿಂದ ಮು.ಕಾ.ನಿ, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಸೇರಿದಂತೆ 100 ಕ್ಕೂ ಹೆಚ್ಚು ಜನ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು. ತರಬೇತಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು. ಈ ಕಾರ್ಯಕ್ರಮದ ಅತಿಥಿಗಳನ್ನು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ಸ್ವಾಗತಿಸಿ ನಿರೂಪಿಸಿದರೆ, ಶ್ರೀ ರಾಜಶೇಖರ್. ಹೆಚ್, ಕಿರಿಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ವಂದಿಸಿದರು.

ಮೈಸೂರು ವಿಭಾಗ ಸೌಹಾರ್ದ ಸಹಕಾರಿಗಳಿಗಾಗಿ ಉಪವಿಧಿ ತಿದ್ದುಪಡಿ ಕಾರ್ಯಾಗಾರ

ದಿನಾಂಕ : 03 ಏಪ್ರಿಲ್ 2013, ಹಾಸನ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ನೇತೃತ್ವದಲ್ಲಿ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ "97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಕಾರ್ಯಗಾರವನ್ನು" ದಿನಾಂಕ–03–04–2013 ರಂದು ಪುಷ್ಪಗಿರಿ ಮಹಾಸಂಸ್ಥಾನ, ಶ್ರೀಬಸವರಾಜೇಂದ್ರ ಪ್ರೌಢಶಾಲೆ ಆವರಣ, ಶರನ ಸದನ, ಹೊಸಲೈನ್ ರಸೆ, ಉತ್ತರ ಬಡಾವಣೆಯಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಸಿ.ಎನ್ ಪರಶಿವಮೂರ್ತಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಇವರು ಮಾಡಿದರು. ಶ್ರೀ ನಾರಾಯಣ ಹೆಗಡೆ ಉಪ ಪ್ರಧಾನವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.. ಬೆಂಗಳೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಸಭೆಯಲ್ಲಿ ಹಾಸನ ಜಿಲ್ಲೆಯ 18 ಸೌಹಾರ್ದ ಸಹಕಾರಿಗಳಿಂದ 18ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ: 04 ಏಪ್ರಿಲ್ 2013, ಮೈಸೂರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ನೇತೃತ್ವದಲ್ಲಿ ಮೈಸೂರು, ಚಾಮರಾಜ ನಗರ, ಮಂಡ್ಯ, ಹಾಗೂ ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿ ಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ "97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಕಾರ್ಯಗಾರವನ್ನು" ದಿನಾಂಕ–03–04–2013 ರಂದು ಜಿಲ್ಲಾ ಸಹಕಾರ ಯೂನಿಯನ್ ಸಭಾ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು ಇಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಸಿ. ಎನ್ ಪರಶಿವ ಮೂರ್ತಿ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಇವರು ಮಾಡಿದರು. ಶ್ರೀ ಎಂ ವಿಶ್ವೇಶ್ವರಯ್ಯ (ಪ್ರಭಾರ) ಮಾನ್ಯ ಪ್ರಾಂಶುಪಾಲರು, ಸಹಕಾರ ತರಬೇತಿ ಕೇಂದ್ರ ಮೈಸೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀ ಕೆ. ಮಲ್ಲಯ್ಯ ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಸಹಕಾರ ಯೂನಿಯನ್, ಮೈಸೂರು ಇವರು ಆಗಮಿಸಿದ್ದರು.

ಈ ಸಭೆಯಲ್ಲಿ ಮೈಸೂರು, ಚಾಮರಾಜ ನಗರ, ಮಂಡ್ಯ, ಹಾಗೂ ಕೊಡಗು ಜಿಲ್ಲೆಗಳ 40 ಸೌಹಾರ್ದ ಸಹಕಾರಿಗಳಿಂದ 49 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ : 05 ಏಪ್ರಿಲ್ 2013, ದಕ್ಷಿಣ ಕನ್ನಡ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.. ಬೆಂಗಳೂರು. ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ "97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಸಹಕಾರಿಯ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಕಾರ್ಯಗಾರವನ್ನು" ದಿನಾಂಕ–05–04–2013 ರಂದು ಎಂ.ಸಿ.ಸಿ. ಬ್ಯಾಂಕ್ ಸಭಾಭವನ, ಲೈಟ್‌ಹೌಸ್, ಹಿಲ್ ರಸ್ತೆ, ಹಂಪನಕಟ್ಟೆ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಎಸ್.ಆರ್. ಸತೀಶ್ಚಂದ್ರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.. ಬೆಂಗಳೂರು ಇವರು ನೆರವೇರಿಸಿದರು. ಶ್ರೀ ಪ್ರಕಾಶ್ ರಾವ್, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಮಂಗಳೂರು, ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀಮತಿ ಕೆ. ಸಾವಿತ್ರಿ ರೈ, ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಸಹಕಾರ ಯೂನಿಯನ್, ಮಂಗಳೂರು ಇವರು ಆಗಮಿಸಿದ್ದರು.

ಮೈಸೂರಿನಲ್ಲಿ ಶ್ರೀ ಸಿ.ಎನ್. ಪರಶಿವಮೂರ್ತಿ ಇವರಿಂದ ಕಾರ್ಯಾಗಾರದ ಉದ್ಘಾಟನೆ.

ಈ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 35 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ : 06 ಏಪ್ರಿಲ್ 2013, ಉಡುಪಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ "97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಕಾರ್ಯಗಾರವನ್ನು" ದಿನಾಂಕ–06–04–2013 ರಂದು ಉಡುಪಿ ತಾಲ್ಲೂಕು ಇಂಡಸ್ಟ್ರಿಯಲ್ ಕೋ–ಅಪರೇಟಿವ್ ಸೊಸೈಟಿ ಸಭಾಭವನ, ಕಿನ್ನಿಮೂಲ್ಕಿ, ಉಡುಪಿ ಇಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಸತೀಶ್ಚಂದ್ರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.. ಬೆಂಗಳೂರು ಇವರು ಮಾಡಿದರು. ಶ್ರೀಮತಿ ಕೆ. ನಯನ, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಮಂಗಳೂರು, ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀ ಹೆಚ್.ಬಿ.ಜಗದೀಶ್ ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಸಹಕಾರ ಯೂನಿಯನ್, ಉಡುಪಿ ಇವರು ಆಗಮಿಸಿದ್ದರು.

ಈ ಸಭೆಯಲ್ಲಿ ಉಡುಪಿ ಜಿಲ್ಲೆಯ 42 ಸೌಹಾರ್ದ ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿದ್ದರು.

ಮೈಸೂರು ವಿಭಾಗದ ಈ ಎಲ್ಲ ಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಿ.ಎನ್. ಪರಶಿವಮೂರ್ತಿಯವರು "ಸಂವಿಧಾನ

ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯಿದೆ ತಿದ್ದುಪಡಿ ಅಂಶಗಳು ಮತ್ತು ಅವುಗಳ ಪರಿಣಾಮಗಳು", ಶ್ರೀ ನಾರಾಯಣ ಹೆಗಡೆ ಉಪಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.. ಬೆಂಗಳೂರು ಇವರು "ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಅಂಶಗಳು", ಶ್ರೀ ಗುರುಪ್ರಸಾದ್, ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.. ಬೆಂಗಳೂರು ಇವರು "ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜವಾಬ್ದಾರಿ" ವಿಷಯಗಳ ಬಗ್ಗೆ ಉಪನ್ಯಾಸವನ್ನು ನೀಡಿದರು. ನಂತರ ಸದರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು. ಸಭೆಯನ್ನು ಶ್ರೀ ಶಿವಕುಮಾರ ಬಿರಾದಾರ, ವಿಭಾಗೀಯಾಧಿಕಾರಿ, ಮೈಸೂರು ಇವರು ಸ್ವಾಗತವನ್ನು ಮಾಡುವ ಮೂಲಕ ಆರಂಭಿಸಿ ಅಂತಿಮವಾಗಿ ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಸಮಾರೋಪಗೊಳಿಸಿದರು.

31 ಮಾರ್ಚ್ 2013ರ ಅಂತ್ಯಕ್ಕೆ ಸೌಹಾರ್ದ ಸಹಕಾರಿಗಳ ಅಂಕಿಅಂಶಗಳು

ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಚಿತ್ರದುರ್ಗ.

ಠೇವಣಿಗಳು	–	48.18 ಕೋಟಿಗಳು
ಸಾಲಗಳು	–	37.76 ಕೋಟಿಗಳು
ನಿಧಿಗಳು	–	18.91 ಕೋಟಿಗಳು
ಲಾಭ	–	2.30 ಕೋಟಿಗಳು
CRAR	–	24%
NOF	–	15.6 ಕೋಟಿಗಳು
NPA	–	Gross 5%
NPA	–	Net 0%

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ‘1.08 ಕೋಟಿ ನಿವ್ವಳ ಲಾಭ

ಪುತ್ತೂರು : ಇಲ್ಲಿನ ದರ್ಬೆಯಲ್ಲಿ ಪ್ರಧಾನ ಕಛೇರಿ ಹೊಂದಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯು 31–03–2013 ಕ್ಕೆ ಕೊನೆಗೊಂಡ ಆರ್ಥಿಕ ವರ್ಷಾಂತ್ಯಕ್ಕೆ ‘1.08ಕೋಟಿ ನಿವ್ವಳ ಲಾಭ ಗಳಿಸಿರುತ್ತದೆ. 2001ರಲ್ಲಿ ಆರಂಭಗೊಂಡ ಸಹಕಾರಿಯು 9 ಶಾಖೆಗಳ ಮೂಲಕ ಕಾರ್ಯಾಚರಿಸುತ್ತಿದ್ದು ನಿರಂತರ ಪ್ರಗತಿಯಲ್ಲಿ ಮುನ್ನಡೆಯುತ್ತಿದೆ. ಪ್ರಸ್ತುತ ಸಹಕಾರಿಯು 12500 ಸದಸ್ಯರನ್ನು ಹೊಂದಿದ್ದು ‘60 ಕೋಟಿ ಠೇವಣಿಯನ್ನು ಸಂಗ್ರಹಿಸಿ ‘43.50 ಕೋಟಿ ಸಾಲ ವಿತರಿಸಿರುವ ಸಹಕಾರಿಯ ದುಡಿಯುವ ಬಂಡವಾಳವು 62 ಕೋಟಿ ಇರುತ್ತದೆ.

ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ

ಲಾಭ	–	94,96,192

ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

ಠೇವಣಿಗಳು	–	193.86 ಕೋಟಿಗಳು
ಮುಂಗಡಗಳು	–	121.68 ಕೋಟಿಗಳು
Net NPA	–	0.4%

ಹೊಸಪೇಟೆಯ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್

2012–13 ನೇ ಸಾಲಿನ ಬ್ಯಾಂಕಿನ ಆರ್ಥಿಕ ಪಕ್ಷಿನೋಟ

• ಶೇರು ಬಂಡವಾಳ	3.29 ಕೋಟಿ
• ಠೇವಣಿಗಳು	97.71 ಕೋಟಿ
• ಸಾಲ ಹಾಗೂ ಮುಂಗಡ	66.70 ಕೋಟಿ
• ಒಟ್ಟು ವ್ಯವಹಾರ	165.00 ಕೋಟಿ
• ದುಡಿಯುವ ಬಂಡವಾಳ	115.07 ಕೋಟಿ
• ನಿವ್ವಳ ಅನುತ್ಪಾದಕ ಆಸ್ತಿ (ಎನ್‌ಪಿಎ)	0%
• ಒಟ್ಟು ನಿವ್ವಳ ಲಾಭ	2.28 ಕೋಟಿ
• ತೆರಿಗೆ ನಂತರ ನಿವ್ವಳ ಲಾಭ	1.45 ಕೋಟಿ

ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇದರ 2012–13 ನೇ ಸಾಲಿನ ಸಹಕಾರಿಯ ಹಣಕಾಸಿನ ಸಂಕ್ಷಿಪ್ತ ವಿವರ

• ಶೇರು ಬಂಡವಾಳ	ರೂ. 1 ಕೋಟಿ 26 ಲಕ್ಷ 19 ಸಾವಿರ
• ಠೇವಣಿಗಳು	ರೂ. 52 ಕೋಟಿ 01 ಲಕ್ಷ 23 ಸಾವಿರ
• ಸಾಲ & ಮುಂಗಡಗಳು	38 ಕೋಟಿ 26 ಲಕ್ಷ 31 ಸಾವಿರ
• ದುಡಿಯುವ ಬಂಡವಾಳ	ರೂ. 56 ಕೋಟಿ 56 ಲಕ್ಷ 76 ಸಾವಿರ
• ಪ್ರಸಕ್ತ ವರ್ಷದ (2012–13) ವಹೀವಾಟು	ರೂ. 538 ಕೋಟಿ
• ಸಾಲ ವಸೂಲಾತಿ ಪ್ರಮಾಣ	ಶೇ. 97
• NPA	ಶೇ. 2.82
• ಹೂಡಿಕೆಗಳು	ರೂ. 13 ಕೋಟಿ 66 ಲಕ್ಷ 13 ಸಾವಿರ
• CD RATIO :	73.57%
• CAR :	12%

ಪಾವಗಡ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಲಿ.

ಷೇರು ಬಂಡವಾಳ	–	1.55 ಕೋಟಿ
ಠೇವಣಿಗಳು	–	46.27 ಕೋಟಿಗಳು
ಸಾಲಗಳು	–	52.32 ಕೋಟಿಗಳು
ಲಾಭ	–	2.03 ಕೋಟಿಗಳು

ಸೌಹಾರ್ದ ಸಹಕಾರಿಗಳಿಗಾಗಿ ಉಪವಿಧಿ ತಿದ್ದುಪಡಿ ತರಬೇತಿ ಅಭಿಯಾನ

ದಿನಾಂಕ : 03.04.2013 ಬೆಂಗಳೂರಿನಲ್ಲಿ ತರಬೇತಿ ಅಭಿಯಾನಕ್ಕೆ ನಿಬಂಧಕರಾದ ಶ್ರೀ ಎನ್.ಎಸ್. ಚನ್ನಪ್ಪಗೌಡ ಹಾಗೂ ಶ್ರೀ ಆರ್.ಎಸ್. ಹುಚ್ಚಾಚಾರಿ ಇವರಿಂದ ಚಾಲನೆ.

ಬಿಜಾಪುರದ ಕಾರ್ಯಾಗಾರದ ಉದ್ಘಾಟನೆ

ನಿಬಂಧಕರಾದ ಶ್ರೀ ಎನ್.ಎಸ್. ಚನ್ನಪ್ಪಗೌಡ ಇವರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ ಇವರಿಂದ ನೆನಪಿನ ಕಾಣಿಕೆ.

ದಿನಾಂಕ : 05.04.2013 ಬೆಂಗಳೂರಿನಲ್ಲಿ ಲೆಕ್ಕಪರಿಶೋಧನಾ ನಿರ್ದೇಶಕರಾದ ಶ್ರೀ ಜಿ.ಕರಿಬಸಪ್ಪ, ಜಂಟಿ ನಿಬಂಧಕರಾದ ಶ್ರೀ ಹೆಚ್. ಎಸ್. ನಾಗರಾಜಯ್ಯ ಇವರಿಂದ ಕಾರ್ಯಾಗಾರದ ಉದ್ಘಾಟನೆ.

ವಿವಿಧೆಡೆಗಳಿಂದ ಭಾಗವಹಿಸಿದ್ದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು

ಶಿವಮೊಗ್ಗದಲ್ಲಿ ಶ್ರೀ ಎನ್.ಜಿ. ನಾಗ ಭೂಷಣ, ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಶಿವಮೊಗ್ಗ ಇವರಿಂದ ಉದ್ಘಾಟನೆ.

ಬಾಗಲಕೋಟೆಯಲ್ಲಿ ಸಹಕಾರಿಗಳ ಉಪನಿಬಂಧಕರಾದ ಶ್ರೀ ಹೆಚ್.ವೈ.ಗದ್ದನಕೆರಿ ಇವರಿಂದ ಕಾರ್ಯಾಗಾರದ ಉದ್ಘಾಟನೆ

ಬೆಳಗಾವಿ ವಿಭಾಗ ಸೌಹಾರ್ದ ಸಹಕಾರಿಗಳಿಗಾಗಿ ಉಪವಿಧಿ ತಿದ್ದುಪಡಿ ಕಾರ್ಯಾಗಾರ

ದಿನಾಂಕ : 03 ಏಪ್ರಿಲ್ 2013, ಇಂಡಿ

ನಗರದ ಶಾಂತೇಶ್ವರ ಮಂಗಲಕಾರ್ಯಲಯ ದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು ಇಂಡಿ, ಸಿಂದಗಿ ಹಾಗೂ ಬಿಜಾಪೂರು ಗ್ರಾಮಾಂತರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳಿಗೆ ಏರ್ಪಡಿಸಿದ ತರಬೇತಿ ಕಾರ್ಯಗಾರವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್ ಇವರು ಉದ್ಘಾಟಿಸಿ ಮಾತನಾಡುತ್ತ ನಿಸರ್ಗದಲ್ಲಿ ಬದಲಾವಣೆಗಳು ಆಗುವುದು ಸಹಜ ಪಕ್ರಿಯೆ ಅದರಂತೆ ಸಂಧರ್ಬಕ್ಕನುಗುಣವಾಗಿ ಹಾಗೂ ಕಾಲಕ್ಕನುಗುಣವಾಗಿ ಸಂವಿಧಾನದಲ್ಲಿ ತಿದ್ದುಪಡಿ ನಡೆಯುತ್ತಿದ್ದು ಅದರಂತೆ 97ನೇ ಸಂವಿಧಾನ ತಿದ್ದುಪಡಿ ಆಗಿರುತ್ತದೆ. ಈ ಹಿನ್ನಲೆಯಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಉಪವಿಧಿಗಳನ್ನು ತಿದ್ದುಪಡಿಮಾಡಿಕೊಳ್ಳಬೇಕು ಹಾಗೂ ಸಹಕಾರಿಗಳು ಮತ್ತಷ್ಟು ಕ್ರಿಯಾಶೀಲ ವಾಗಿ ಕಾರ್ಯನಿರ್ವಹಿಸಬೇಕು ಎಂದರು.

ಕರ್ನಾಟಕ ರಾಜ್ಯದಲ್ಲಿ ಇಂತಹ 33 ತರಬೇತಿ ಶಿಭಿರಗಳು ಒಂದೇ ಕಾಲಕ್ಕೆ 3 ಏಪ್ರೀಲ್ 2013 ರಿಂದ 18 ಏಪ್ರೀಲ್ 2013ರ ಅವಧಿಯಲ್ಲಿ ಹಮ್ಮಿಕೊಂಡಿದ್ದು ಅದರಲ್ಲಿ ಬೆಳಗಾವಿ ವಿಭಾಗದಲ್ಲಿ 16 ತರಬೇತಿ ಶಿಭಿರ ಗಳಿದ್ದು ಇಂಡಿಯಲ್ಲಿ ಜರುಗಿದ ಶಿಬಿರ ಪ್ರಥಮವಾಗಿದೆ. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಾಧ ಶ್ರೀ ಎಸ್.ಜೆ. ಕುಲಕರ್ಣಿ, ಕೆ.ವಿ.ಜಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾದ ಶ್ರೀ ಎನ್.ಹೆಚ್.ದೇಶಪಾಂಡೆ ಹಾಗೂ ಅಧ್ಯಕ್ಷತೆಯನ್ನು ಹಿರಿಯ ಸಹಕಾರಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ವಹಿಸಿದ್ದರು. ಈ ಒಂದು ದಿನದ ಕಾರ್ಯಗಾರದಲ್ಲಿ ಸಂವಿಧಾನ 97ನೇ ತಿದ್ದುಪಡಿಯ ಬಗ್ಗೆ ಶ್ರೀ ಎಸ್.ಜಿ. ಜೋಷಿ ನಿವೃತ್ತ ಸಹಾಯಕ ನಿಬಂಧಕರು ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿಗಳ ಬಗ್ಗೆ ಶ್ರೀ ಭಾಸ್ಕರ ಹೇಗಡೆ ಕಾಗೇರಿಯವರು ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಸ್ತಾವಿಕವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವಿಭಾಗೀಯ ಅಧಿಕಾರಿಯವರಾದ ಶ್ರೀ ಜಿ.ಎಸ್. ಟೋಪಣ್ಣವರ ನೇರವೇರಿಸಿದರು. ಈ ಕಾರ್ಯಾಗಾರದಲ್ಲಿ ಇಂಡಿ, ಸಿಂದಗಿ ಹಾಗೂ ಬಿಜಾಪೂರು ಗ್ರಾಮಾಂತರದ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿದ್ದರು. ಶ್ರೀ ಸೂರ್ಯಕಾಂತ ರ್‍ಯಾಕಲೆ ವಂದಿಸಿದರು.

ದಿನಾಂಕ : 04 ಏಪ್ರಿಲ್ 2013, ಜಮಖಂಡಿ

ಜಮಖಂಡಿ : ದಿನಾಂಕ: 04–04–2013ರಂದು ನಗರದ ಕೃಷ್ಣರೆಸಿಡೆನ್ಸಿ ಹೋಟೆಲನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು ಜಮಖಂಡಿ ಮತ್ತು ಮುದೋಳ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳಿಗಾಗಿ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಸಹಕಾರಿ ಅಧಿನಿಯಮ ತಿದ್ದುಪಡಿ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಮಖಂಡಿ ಅರ್ಬನ ಕೋ–ಆಫ್ ಬ್ಯಾಂಕಿನ ನಿವೃತ್ತ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎ.ಹೆಚ್ ಶೇಠರವರು ವಹಿಸಿದ್ದರು. ಉಪವಿಧಿ ತಿದ್ದುಪಡಿ ಬಗ್ಗೆ ಮಾಹಿತಿಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಸಂವಿಧಾನ ತಿದ್ದುಪಡಿ ಬಗ್ಗೆ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಎಸ್.ಜಿ.ಜೋಷಿ ಮಾಹಿತಿ ನೀಡಿದರು. ಪ್ರಾರ್ಥನೆಯನ್ನು ಶಕುಂತಲ ಮಾಳಿ ಹಾಗೂ ಶೃತಿ ಮಠದ, ಸ್ವಾಗತ ಪ್ರಾಸ್ತವಿಕ ನುಡಿಯನ್ನು ಬೆಳಗಾವಿ ವಿಭಾಗೀಯ ರಿಜಿನಲ ಮ್ಯಾನೇಜರಾದ ಶ್ರೀ ಜಿ.ಎಸ್ ಟೋಪಣ್ಣವರ ಇವರು ಹಾಗೂ ನಿರೂಪಣೆ ಬೆಳಗಾವಿ ಕಛೇರಿಯಲ್ಲಿ ಅಧಿಕಾರಿ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ನೇರವೇರಿಸಿಕೊಟ್ಟರು.

ಜಮಖಂಡಿ ಮತ್ತು ಮುಧೋಳ ತಾಲೂಕುಗಳ 57 ಸೌಹಾರ್ದ ಸಹಕಾರಿಗಳ 74 ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿ ಈ ಕಾರ್ಯಗಾರದ ಲಾಭವನ್ನು ಪಡೆದುಕೊಂಡರು.

ಸಂಪನ್ಮೂಲಗಳನ್ನು ಜಾಗೃತಿಯಿಂದ ಕ್ರೋಢಿಕರಿಸಿ ಭವಿಷ್ಯದಲ್ಲಿ ಸ್ಪರ್ಧೆಯನ್ನು ಎದುರಿಸಿ ಸದೃಡ ಹೊಂದಲು ಕರೆ - ಶ್ರೀ ಹೆಚ್.ವೈ ಗದ್ದನಕೇರಿ

ದಿನಾಂಕ : 06 ಏಪ್ರಿಲ್ 2013, ಬಾಗಲಕೋಟೆ : ಸಹಕಾರ ಕ್ಷೇತ್ರದಲ್ಲಿನ ಸಹಕಾರಿ ಸಂಘಗಳು ಸಂಪನ್ಮೂಲಗಳನ್ನು ಜಾಗೃತಿಯಿಂದ ಕ್ರೋಡಿಕರಿಸಿ ಭವಿಷ್ಯತದಲ್ಲಿ ಸ್ಪರ್ಧೆಯನ್ನು ಎದುರಿಸಿದರೆ ಸದೃಡ ಹೊಂದಲು ಸಾಧ್ಯವೆಂದು ಬಾಗಲಕೋಟದ ಸಹಕಾರಿ ಸಂಘಗಳು ಉಪನಿಬಂಧಕರಾದ ಶ್ರೀ ಹೆಚ್.ವೈ ಗದ್ದನಕೆರಿ ಕರೆ ನೀಡಿದರು.

ದಿನಾಂಕ: 06-04-2013ರಂದು ನವನಗರದ ಡಿ.ಸಿ.ಸಿ. ಬ್ಯಾಂಕಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು ಬಾಗಲಕೋಟೆ, ಹುನಗುಂದ, ಬಿಳಗಿ, ಬದಾಮಿ ಹಾಗೂ ಬಿಜಾಪೂರು ಜಿಲ್ಲೆಯ ಮುದ್ದೇಬಿಹಾಳ, ಬಸವನ ಬಾಗೇವಾಡಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳಿಗಾಗಿ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಸಹಕಾರಿ ಅಧಿನಿಯಮ ತಿದ್ದುಪಡಿ ಹಾಗೂ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡುತ್ತ ಸಹಕಾರ ಕ್ಷೇತ್ರದಲ್ಲಿ ಕಾಲ ಕಾಲಕ್ಕೆ ತಕ್ಕಂತೆ ಹಲವು ತಿದ್ದುಪಡಿ ಬದಲಾವಣೆಯಾಗುತ್ತ ಬಂದಿದೆ. ಅದರಂತೆ 97ನೇ ಸಂವಿಧಾನ ತಿದ್ದುಪಡಿಗನುಗುಣವಾಗಿ ಸೌಹಾರ್ದ ಕಾಯ್ದೆ ತಿದ್ದುಪಡಿಯಾಗಿದ್ದರಿಂದ ಪ್ರತಿಯೊಂದು ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಉಪವಿಧಿಗಳನ್ನು ತಿದ್ದುಪಡಿ ಮಾಡಿಕೊಳ್ಳುವುದು ಅನಿವಾರ್ಯ; ತಿದ್ದುಪಡಿಯಿಂದಾಗಿ ಸಹಕಾರ ಸಂಘ ಸ್ಥಾಪನೆ ಮಾಡುವುದು ಮೂಲಭೂತ ಹಕ್ಕಾಗಿ ಪರಿವರ್ತನೆ ಹೊಂದಿದ್ದು ಸಹಕಾರ ಕ್ಷೇತ್ರದ ಬೆಳವಣಿಗೆಗೆ, ಸಹಾಯಕವಾದುದ್ದು ಇದರಿಂದ ಸಹಕಾರ ಕ್ಷೇತ್ರದಲ್ಲಿ ಸ್ಪರ್ಧೆ ಸಹಜವಾಗಿ ಉಂಟಾಗುತ್ತದೆ ಇದನ್ನು ಸಮರ್ಥವಾಗಿ ನಾವು ನಿಭಾಯಿಸಬೇಕಾಗಿದೆ. ಎಂದು ಹೇಳಿದರು

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಗಲಕೊಟದ ಡಿ.ಸಿ.ಸಿ. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎ.ಎಸ್. ಬುಳ್ಳಾರವರುವಹಿಸಿದ್ದರು ಉಪವಿಧಿ ತಿದ್ದುಪಡಿ ಬಗ್ಗೆ ಮಾಹಿತಿಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಸಂವಿಧಾನ ತಿದ್ದುಪಡಿ ಬಗ್ಗೆ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಎಸ್.ಜಿ.ಜೋಷಿ ಮಾಹಿತಿ ನೀಡಿದ್ದರು. ಸ್ವಾಗತ ಹಾಗೂ ಪ್ರಾಸ್ತವಿಕ ನುಡಿಯನ್ನು ಬೆಳಗಾವಿ ವಿಭಾಗೀಯ ರಿಜಿನಲ ಮ್ಯಾನೇಜರಾದ ಶ್ರೀ ಜಿ.ಎಸ್ ಟೋಪಣ್ಣವರ ಇವರು ಹಾಗೂ ನಿರೂಪಣೆ ಬೆಳಗಾವಿ ಕಛೇರಿಯಲ್ಲಿ ಅಧಿಕಾರಿ ಶ್ರೀ ಸೂರ್ಯಕಾಂತ ರ‍್ಯಾಕಲೆರವರು ನೇರವೇರಿಸಿಕೊಟ್ಟರು.

ಈ ಸಂದರ್ಭದಲ್ಲಿ ಬಾಗಲಕೋಟೆ, ಹುನಗುಂದ, ಬಿಳಗಿ, ಬದಾಮಿ ಹಾಗೂ ಬಿಜಾಪೂರು ಜಿಲ್ಲೆಯ ಮುದ್ದೇಬಿಹಾಳ, ಬಸವನ ಬಾಗೇವಾಡಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾದಿಕಾರಿಗಳು ಉಪಸ್ಥಿತರಿದ್ದು ಈ ಕಾರ್ಯಗಾರದ ಲಾಭವನ್ನು ಪಡೆದುಕೊಂಡರು.

ವಯೋ ನಿವೃತ್ತಿ

ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾಗಿದ್ದ ಡಾ. ಎಸ್.ಎ.ಸಿದ್ಧಾಂತಿಯವರು ದಿನಾಂಕ : 31.03.2013ರಂದು ವಯೋನಿವೃತ್ತಿ ಹೊಂದಿದರು. ಅವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ಬಿ. ಎಸ್. ವಿಶ್ವನಾಥನ್ ಅವರ ನಿವೃತ್ತಿ ಜೀವನಕ್ಕೆ ಶುಭ ಕೋರಿದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾಗಿರುವ ಶ್ರೀ ಶರಣಗೌಡ ಜಿ ಪಾಟೀಲ್ ಉಪಸ್ಥಿತರಿದ್ದು ಸಂಯುಕ್ತ ಸಹಕಾರಿಯ ಪರವಾಗಿ ಡಾ.ಎಸ್ ಎ ಸಿದ್ಧಾಂತಿಯವರಿಗೆ ನೆನಪಿನ ಕಾಣಿಕೆಯನ್ನು ನೀಡಿ ಶುಭ ಕೋರಿದರು.

ಸಹಕಾರ ಕ್ಷೇತ್ರದ ಮಾದರಿ ಸಂಸ್ಥೆ "ಅಮುಲ್"

http://www.amul.com

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಭಾರತ ದೇಶದ ವಿಸ್ತಾರವಾದ ಸಹಕಾರ ಕ್ಷೇತ್ರಕ್ಕೆ ಕ್ಷೀರ ಕ್ರಾಂತಿಯ ಮೂಲಕ ಹೊಸ ಸಾಧ್ಯತೆಯನ್ನು ತೆರೆದಿಟ್ಟ ಕ್ಷೇತ್ರ ಡೈರಿ ಉದ್ಯಮ. ಸಹಕಾರ ಕ್ಷೇತ್ರದ ಮೂಲಕ ಗ್ರಾಮೀಣಾಭಿವೃದ್ಧಿ ಎಂದರೇನು ಎಂಬುದರ ಸಮರ್ಥ ಪರಿಭಾಷೆ ಗುಜರಾತಿನ "ಆನಂದ" ಎನ್ನುವ ಪುಟ್ಟ ಗ್ರಾಮ. ಜಾಗತಿಕ ಭೂಪಟದಲ್ಲಿ ಕ್ಷೀರ ಕ್ರಾಂತಿಯ ಕೇಂದ್ರವಾಗಿ ಗುರುತಿಸಿಕೊಂಡ ಗ್ರಾಮವಿದು. ಸಹಕಾರ ಕ್ಷೇತ್ರದ ಮೂಲಕ ಕೆಳ ಮಧ್ಯಮ ವರ್ಗವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದು ಹಾಗೂ ಸಹಕಾರವನ್ನು ಉದ್ಯಮವಾಗಿ ಬೆಳೆಸುವುದರ ಸಾಧ್ಯತೆಯಾಗಿ, ಉದಾಹರಣೆಯಾಗಿ ನಮ್ಮ ಮುಂದಿರುವ ಸಂಸ್ಥೆ "ಅಮೂಲ್" ಎಂದೇ ಕರೆಯಲ್ಪಡುವ "ಗುಜರಾತ್ ಕೋ–ಆಪರೇಟೀವ್ ಮಿಲ್ಕ್ ಮಾರ್ಕೇಟಿಂಗ್ ಫೆಡರೇಷನ್ ಲಿ.," ಇರುವುದು ಈ ಪುಟ್ಟ ಗ್ರಾಮದಲ್ಲೆ.

ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಥಾಪಿಸಿದ್ದ ಗುಜರಾತಿನ ಕೈರಾ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ತ್ರಿಭುವನದಾಸ್ ಪಟೇಲ್ ಇವರ ಪ್ರಾಮಾಣಿಕತೆ ಹಾಗೂ ದೂರದರ್ಶಿತ್ವ, ಕ್ಷೀರಕ್ರಾಂತಿಯ ಪಿತಾಮಹ ಹಾಗೂ ಭಾರತದ ಹಾಲಿನ ಮನುಷ್ಯ ಎಂದೇ ಪ್ರಸಿದ್ಧ ಡಾ.ವರ್ಗೀಸ್ ಕುರಿಯನ್ ಇವರ ಪರಿಶ್ರಮದಿಂದ ಬೆಳೆದು ಉದ್ಯಮವಾಗಿ ದೇಶ ವಿದೇಶಗಳಿಗೆ ಹಾಲು ಹಾಗೂ ಹಾಲಿನ ಉತ್ಪಾದನೆಗಳನ್ನು ತಲುಪಿಸುವಷ್ಟು ಎತ್ತರ ಬೆಳೆದು ನಿಂತ ಸಂಸ್ಥೆ "ಅಮೂಲ್". ಭಾರತದ ಡೈರಿ ಸಹಕಾರ ಕ್ಷೇತ್ರದ ಉತ್ಪಾದನೆಗಳನ್ನು ಇಂದು ಶ್ರೀಲಂಕಾ, ಅಫ್ಘಾನಿಸ್ತಾನ, ಚೀನಾ, ಜಪಾನ್, ಸಿಂಗಾಪುರ್, ಥೈಲೆಂಡ್, ಅಮೇರಿಕಾ ಮುಂತಾದ ದೇಶಗಳಲ್ಲಿ ಕಾಣುವಂತೆ ಮಾಡಿದ ಸಾಧನೆ ಕೂಡ ಅಮೂಲ್‌ನದ್ದು. ಸಹಕಾರ ಕ್ಷೇತ್ರದ ಸಾಧನೆಯ ಗುರುತಾಗಿರುವ ಈ ಸಂಸ್ಥೆಯ ವೆಬ್‌ತಾಣದ ಪರಿಚಯ ಇಲ್ಲಿದೆ.

ವೆಬ್‌ತಾಣ 10 : http://www.amul.com

- "ಗುಜರಾತ್ ಕೋ–ಆಪರೇಟೀವ್ ಮಿಲ್ಕ್ ಮಾರ್ಕೇಟಿಂಗ್ ಫೆಡರೇಷನ್ ಲಿ.," (ಅಮೂಲ್) ಇದರ ಪ್ರಾರಂಭ, ಇದು ಬೆಳೆದು ಬಂದ ರೀತಿ, ಇದರ ಸಂಘಟನಾತ್ಮಕ ರಚನೆ, ಇದರ ಸದಸ್ಯ ಸಂಸ್ಥೆಗಳು, ಆಡಳಿತ ನಿರ್ವಹಣೆಯ ಮಾದರಿ ಇವುಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಅಮೂಲ್ ಉದ್ಯಮವಾಗಿ ಕಾರ್ಯಾಚರಣೆ ಮಾಡುವ ಮಾದರಿ, ಅಮೂಲ್ ಉತ್ಪನ್ನಗಳ ವಿವರ ಹಾಗೂ ಅವುಗಳ ಮಾರಾಟದ ಅಂಕಿಅಂಶಗಳನ್ನು ಈ ತಾಣದಲ್ಲಿ ನೋಡಬಹುದು.
- ಅಮೂಲ್‌ನ ಕೇಂದ್ರ ಕಛೇರಿ, ಉಪ ಕಛೇರಿ, ವಿಭಾಗೀಯ ಕಛೇರಿ ಹಾಗೂ ಮಾರುಕಟ್ಟೆ ಕೇಂದ್ರಗಳ ವಿವರಗಳನ್ನು, ಸಂಪರ್ಕ ವಿಳಾಸಗಳನ್ನು ಈ ತಾಣದಿಂದ ಪಡೆಯಬಹುದು. ಅಲ್ಲದೇ ರಫ್ತು ಮಾಡಲ್ಪಡುವ ಅಮೂಲ್ ಉತ್ಪನ್ನಗಳು ಹಾಗೂ ದೇಶಗಳ ವಿವರಗಳನ್ನು ಕೂಡ ಈ ತಾಣದಲ್ಲಿ ಪಡೆಯಬಹುದು.
- ಅಮೂಲ್‌ನ 18 ಉತ್ಪನ್ನಗಳು (ಬ್ರಾಂಡ್) ಹಾಗೂ ಅವುಗಳ ಉಪ ಉತ್ಪನ್ನಗಳು, ಇವೆಲ್ಲವುಗಳ ವಿಶಿಷ್ಟತೆ, ವಿವರ, ಪ್ಯಾಕಿಂಗ್ ಮಾಹಿತಿ, ಮಾರುಕಟ್ಟೆ ವಿವರಗಳನ್ನು ಈ ತಾಣದಿಂದ ಪಡೆಯಬಹುದು.
- 1998–99ನೇ ಸಾಲಿನಿಂದ ಇದುವರೆಗಿನ ಅಮೂಲ್‌ನ ವಾರ್ಷಿಕ ವರದಿ ಹಾಗೂ ಅಧ್ಯಕ್ಷರ ಮಾತನ್ನು ಈ ತಾಣದಲ್ಲಿ ನೋಡಬಹುದು ಅಲ್ಲದೇ ಇದುವರೆಗೆ ಅಮೂಲ್ ಪಡೆದಿರುವ ಪ್ರಶಸ್ತಿ ಹಾಗೂ ಗೌರವಗಳ ವಿವರಗಳು ಕೂಡ ಈ ತಾಣದಲ್ಲಿ ಲಭ್ಯ.
- ಅಮೂಲ್ ಸಂಸ್ಥೆಯಿಂದ ನೀಡಲ್ಪಡುವ "ಅಮೂಲ್ ವಿದ್ಯಾಶ್ರೀ ಅವಾರ್ಡ್" ಹಾಗೂ "ಅಮೂಲ್ ವಿದ್ಯಾಭೂಷಣ ಅವಾರ್ಡ್" ಗಳ ವಿವರಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.

- ಅಮೂಲ್ ಜಾಹೀರಾತುಗಳ ವಿವರಗಳು, ಜಾಹೀರಾತಿಗಾಗಿ ರೂಪಿಸಿದ ಕಥೆಗಳು, ದೂರದರ್ಶನದಲ್ಲಿ ಮೂಡಿಬಂದ ಅಮೂಲ್ ವಿವರಗಳು, ಅಮೂಲ್ ಆಯೋಜಿಸಿದ್ದ ವಿವಿದ ಸ್ಪರ್ಧೆಗಳ ವಿವರಗಳನ್ನು ಈ ತಾಣದಲ್ಲಿ ನೋಡಬಹುದು.
- ಅಮೂಲ್‌ನ ವಾರ್ಷಿಕ ಕಾರ್ಯಚಟುವಟಿಕೆಗಳ ವಿವರಗಳು, ಅಮೂಲ್‌ನ ಪಾರ್ಲರ್ ಹಾಗೂ ಕೆಫೆಗಳ ಮಾಹಿತಿ, ಅಮೂಲ್‌ನೊಂದಿಗೆ ವ್ಯವಹರಿಸುವ ವಿಧಾನಗಳ ವಿವರಗಳು, ಅಮೂಲ್‌ಗೆ ಸಂಬಂಧಿಸಿದ ಪ್ರಶ್ನೋತ್ತರಗಳು, ಪೂರೈಕೆದಾರರಿಗೆ, ಗ್ರಾಹಕರಿಗೆ ಹಾಗೂ ಮಾರಾಟಗಾರರರಿಗೆ ಅವಶ್ಯವೆನಿಸುವ ವಿವರಗಳು, ನಮೂನೆಗಳನ್ನು ಕೂಡ ಈ ತಾಣದಲ್ಲಿ ಪಡೆಯಬಹುದು.
- ಅಮೂಲ್‌ನ ಅಂಗಸಂಸ್ಥೆಗಳ ವಿವರಗಳು, ಅಮೂಲ್ ರಿಲೀಫ್ ಟ್ರಸ್ಟ್‌ನ ವಿವರಗಳು ಹಾಗೂ ಗುಜರಾತಿನಲ್ಲಿ ಆಯೋಜಿಸಿದ್ದ ಹಸಿರು ಗುಜರಾತ್ ಅಭಿಯಾನದ ವಿವರಗಳನ್ನು ನೋಡಬಹುದು.
- ಅಮೂಲ್‌ನ "ಬೇಬಿ ಗ್ರೋತ್ ಪ್ಲಾನ್", ಡೈರಿ ಕೋ ಆಪರೇಟೀವ್ ಸಾಧನೆಗಳ ಕುರಿತ ವಿವರಗಳು, ಅಮೂಲ್‌ನ ಇತ್ತೀಚೆಗಿನ ಉತ್ಪನ್ನ, ವಿಷಯಗಳ ಮಾಹಿತಿ, ಉತ್ಪನ್ನಗಳ ಕೈಪಿಡಿಯನ್ನು ಈ ವೆಬ್‌ತಾಣದಿಂದ ಪಡೆಯಬಹುದು.

ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಉದ್ಯಮವಾಗಿಯೂ ಬೆಳೆದಿರುವ ಅಮೂಲ್‌ನ ಉತ್ಪನ್ನಗಳು ಹಾಗೂ ಜಾಹಿರಾತುಗಳು ಪ್ರತಿಯೊಬ್ಬರಿಗೂ ಪರಿಚಿತವೇ. ಮಾರ್ಕೇಟಿಂಗ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳಿಗೆ ಅಮೂಲ್‌ನ ಪ್ರಚಾರ ವೈಖರಿ ಹಾಗೂ ಅದರ ಜಾಹೀರಾತು, ಅದು ಬೆಳೆದು ಬಂದ ರೀತಿ ಮಾದರಿಯೂ, ಮಾರ್ಗದರ್ಶಕವೂ ಆಗಿರುವಂತದ್ದು. ಗ್ರಾಮೀಣಾಭಿವೃದ್ಧಿಯ ಸಾಧ್ಯತೆಯಾಗಿ ಆ ಮೂಲಕ ದೇಶದ ಅಭಿವೃದ್ಧಿಗೂ ಕಾರಣವಾಗಿ, ವಿದೇಶದವರೆಗೂ ವಿಸ್ತರಿಸಿ ದೇಶಕ್ಕೆ ವಿದೇಶಿ ವಿನಿಮಯ ಗಳಿಸಿಕೊಡುವ ಸಂಸ್ಥೆಯೂ ಆಗಿ ಬೆಳೆದು ನಿಂತ, ಸಹಕಾರ ಕ್ಷೇತ್ರದ ಸಾಹಸಗಾಥೆಯಾಗಿ ನಿಲ್ಲುವ ಸಂಸ್ಥೆ ಇದು. ಕಾಲದಿಂದ ಕಾಲಕ್ಕೆ ಬದಲಾವಣೆಗೆ ಹೊಂದಿಕೊಂಡು ಬೆಳೆದು ಬಂದ ಅದರ ವಿವರವನ್ನು ಪಡೆಯುವ ಹಾಗೂ ಸಹಕಾರ ಕ್ಷೇತ್ರದ, ಮಾರ್ಕೇಟಿಂಗ್ ಕ್ಷೇತ್ರದ ಆಸಕ್ತರು ಗಮನಿಸಲೇಬೇಕಾದ ಅದರ ವೆಬ್‌ತಾಣವನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ. ಅದರ ಸಾಹಸಗಾಥೆ ಸಹಕಾರ ಸಂಸ್ಥೆಗಳಿಗೆ ಸ್ಫೂರ್ತಿದಾಯಕವಾಗಲಿ ಎನ್ನುವ ಆಶಯ ನಮ್ಮದು.

01. ಉಪವಿಧಿ ತಿದ್ದುಪಡಿಯ ದಿನದಿಂದಲೇ ಆಡಳಿತ ಮಂಡಲಿಯಲ್ಲಿ ಮೀಸಲಾತಿಯಂತೆ ನಿರ್ದೇಶಕರನ್ನು ತೆಗೆದುಕೊಳ್ಳಬೇಕೇ? ಅಥವಾ ಇರುವ ನಿರ್ದೇಶಕರು ಮೀಸಲಾತಿ ಹೊಂದಿದ್ದರೆ ಪ್ರಮಾಣೀಕರಿಸಿಕೊಳ್ಳಬೇಕೇ?

ಉತ್ತರ: ಉಪವಿಧಿ ತಿದ್ದುಪಡಿಯ ಮೂಲಕ ಮೀಸಲಾತಿಗಳಿಗೆ ಪ್ರಾವದಾನ ಮಾಡಿಕೊಂಡರೂ ಸಹಕಾರಿಯ ಮುಂದಿನ ಚುನಾವಣೆಯವರೆಗೆ ಪ್ರಸ್ತುತ ಇರುವಂತೆ ನಿರ್ದೇಶಕರ ಸಂಖ್ಯೆ, ಮೀಸಲಾತಿ, ಕೋರಂಗಳನ್ನು ಮುಂದುವರಿಸಬೇಕು. ಸಹಕಾರಿಯ ಮುಂದಿನ ಚುನಾವಣೆಯಲ್ಲಿ ನಿರ್ದೇಶಕರ ಸಂಖ್ಯೆ, ಮೀಸಲಾತಿ, ಕೋರಂಗಳಿಗೆ ಸಂಬಂಧಿಸಿದ ಬದಲಾವಣೆಯನ್ನು ಅನುಷ್ಠಾನಗೊಳಿಸಬೇಕು.

02. ಮುಖ್ಯ ಕಾರ್ಯನಿರ್ವಹಕ ಸಹಕಾರಿಯ ಸದಸ್ಯನಾಗಬಹುದೇ?

ಉತ್ತರ : ಯಾವುದೇ ವ್ಯಕ್ತಿಯನ್ನು ಸಹಕಾರಿಯ ಸದಸ್ಯನಾಗಿ ಸೇರಿಸಿಕೊಳ್ಳುವ ಅಧಿಕಾರ ಸಹಕಾರಿಯ ಆಡಳಿತ ಮಂಡಳಿಗೆ ಇರುತ್ತದೆ. ಸಹಕಾರಿಯ ಮುಖ್ಯ ಕಾರ್ಯನಿರ್ವಹಕನನ್ನು ಸಹಕಾರಿಯ ಉಪವಿಧಿ/ಸಿಬ್ಬಂದಿ ಸೇವಾ ನಿಯಮದಲ್ಲಿ ವ್ಯತಿರಿಕ್ತವಾಗಿ ಹೇಳದಿದ್ದಲ್ಲಿ ಸದಸ್ಯರಾಗಿ ಸೇರಿಸಿಕೊಳ್ಳಬಹುದಾಗಿದೆ.

03. ಮೀಸಲು ಸ್ಥಾನಗಳಲ್ಲಿ ಸದಸ್ಯರಿಲ್ಲದಿದ್ದರೆ ಆ ಸ್ಥಾನದ ಚುನಾವಣೆ ಹೇಗೆ? ಸಾಮಾನ್ಯ ವರ್ಗದಿಂದ ತುಂಬಬಹುದೇ? ಅಥವಾ ಉಪವಿಧಿಯಲ್ಲಿ ಬೇರೆ ರೀತಿ ತುಂಬಲು ಪ್ರಾವಧಾನ ಮಾಡಿಕೊಳ್ಳಬಹುದೇ? ಅಥವಾ ಕಾಲಿ ಬಿಡಬೇಕೇ?

ಉತ್ತರ : ಚುನಾವಣಾ ಸಂದರ್ಭದಲ್ಲಿ ಮೀಸಲು ಸ್ಥಾನಗಳಲ್ಲಿ ಸದಸ್ಯರಿಲ್ಲದಿದ್ದರೆ ಅಂತಹ ಸ್ಥಾನವನ್ನು ಸಾಮಾನ್ಯ ವರ್ಗದಿಂದ ತುಂಬಬಹುದಾಗಿದೆ. ಆದರೆ ಮೀಸಲು ಸ್ಥಾನದ ಸದಸ್ಯರಿದ್ದಲ್ಲಿ ಆ ವರ್ಗದ ಸದಸ್ಯರಿಗೆ ಸದರಿ ಸ್ಥಾನವನ್ನು ಮೀಸಲಿಡಬೇಕು. ಆ ವರ್ಗದ ಸದಸ್ಯರು ನಾಮಪತ್ರ ಸಲ್ಲಿಸದಿದ್ದರೂ ಅಂತಹ ಮೀಸಲು ಸ್ಥಾನವನ್ನು ಖಾಲಿ ಇರಿಸತಕ್ಕದ್ದು.

04. ಪಿಗ್ಮಿ ಠೇವಣಿದಾರರು ಮತ್ತು ಬಂಗಾರದ ಸಾಲ ಪಡೆದವರಿಗೆ ನಾಮಮಾತ್ರ ಸದಸ್ಯತ್ವ ನೀಡಿದರೆ ಸಾಕೇ? ಪೂರ್ಣ ಸದಸ್ಯತ್ವ ನೀಡಲೇಬೇಕೇ?

ಉತ್ತರ : ಸೌಹಾರ್ದ ಅಧಿನಿಯಮ ಕಲಂ 21ಎ ರಲ್ಲಿ ನಾಮಾಮಾತ್ರ ಸದಸ್ಯನ ಕುರಿತು ತಿಳಿಸಿದ್ದು, ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮಮಾತ್ರ ಸದಸ್ಯನಾಗಿ ಸೇರಿಸಿಕೊಳ್ಳಲು ಅವಕಾಶವಿರುತ್ತದೆ.

ಆದರೆ ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯೊಡನೆ ಯಾವುದೇ ವಿಧದ ವ್ಯವಹಾರ ಸಂಬಂಧ ಹೊಂದಿರತಕ್ಕದ್ದು ಅಥವಾ ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯ ಸೇವೆಗಳನ್ನು ಪಡೆಯುವ ಅಗತ್ಯವಿರತಕ್ಕದ್ದು ಅಥವಾ ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯು ಅಗತ್ಯಪಡಿಸುವ ಸೇವೆಗಳನ್ನು ಒದಗಿಸುವ ಸ್ಥಿತಿಯಲ್ಲಿ ಇರತಕ್ಕದ್ದು.

ಮತ್ತು ಸೌಹಾರ್ದ ಅಧಿನಿಯಮ ಕಲಂ 20ನೇ ಪ್ರಕರಣದ ಅಡಿಯಲ್ಲಿ ಸದಸ್ಯತ್ವಕ್ಕೆ ಅರ್ಹನಿದ್ದ ವ್ಯಕ್ತಿಯನ್ನು ನಾಮಮಾತ್ರ ಸದಸ್ಯನೆಂದು ಸೇರಿಸಿಕೊಳ್ಳತಕ್ಕದ್ದಲ್ಲ.

ಸೌಹಾರ್ದ ಅಧಿನಿಯಮ ಕಲಂ 21ಎ(2)ರಡಿ ನಾಮಮಾತ್ರ ಸದಸ್ಯನು, ಸಹಕಾರಿಯ ಆಸ್ತಿಗಳಲ್ಲಿ ಅಥವಾ ಲಾಭಗಳಲ್ಲಿ ಯಾವುದೇ ರೂಪದಲ್ಲಿ ಯಾವುದೇ ಷೇರಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ ಮತ್ತು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸಲು ಮತ್ತು ಸಹಕಾರಿಯ ಮಂಡಲಿಗೆ ನಡೆಯುವ ಚುನಾವಣೆಯೂ ಸೇರಿದಂತೆ ಸಹಕಾರಿಯ ಯಾವುದೇ ಸಭೆಯಲ್ಲಿ ಮತ ಚಲಾಯಿಸಲು ಮತ್ತು ಒಬ್ಬ ನಿರ್ದೇಶಕನಾಗಿ ಅಥವಾ ಪದಾಧಿಕಾರಿಯಾಗಿ ಚುನಾಯಿತನಾಗಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

ಸೌಹಾರ್ದ ಅಧಿನಿಯಮ ಕಲಂ 21ಎ(3) ರಡಿ ಒಬ್ಬ ನಾಮಮಾತ್ರ ಸದಸ್ಯನು ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಗಳನ್ನು ಮತ್ತು ಹಕ್ಕುಗಳನ್ನು ಹೊಂದಿರತಕ್ಕದ್ದು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದ್ದು.

ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮಮಾತ್ರ ಸದಸ್ಯನಾಗಿ ಸೇರಿಸಿಕೊಳ್ಳಲು ಅವಕಾಶವಿರುತ್ತದೆ.

05. ಶೇ.52% ರ ನಿಧಿಯನ್ನು ಬಿಟ್ಟು ಉಳಿದ ಲಾಭಾಂಶ ವಿಂಗಡಣೆ ಮಾಡದೇ ಇದ್ದರೆ ಏನಾಗುತ್ತದೆ?

ಉತ್ತರ : ಸೌಹಾರ್ದ ಅಧಿನಿಯಮ ಕಲಂ 10(xxi)ರಲ್ಲಿ ತಿಳಿಸಿರುವಂತೆ ನಿವ್ವಳ ಲಾಭದಲ್ಲಿ ಲಾಭಾಂಶ ವಿನಿಯೋಗವನ್ನು ಸಾಮಾನ್ಯ ಸಭೆಯಲ್ಲಿ ಮಾಡುವುದು ಕಡ್ಡಾಯ. ಅಧಿನಿಯಮದ ಕಲಂನಡಿ ಪ್ರಾವದಾನವಿರುವ ಶೇ.52% ಲಾಭಾಂಶ ವಿಗಂಡಣೆ ಮಾಡಿ ಉಳಿದ ಲಾಭಾಂಶವನ್ನು ಸಹಕಾರಿಯ ಉಪವಿಧಿಯಲ್ಲಿ ಸೃಜಿಸಿದ ನಿಧಿಗಳಿಗೆ ಸಾಮಾನ್ಯ ಸಭೆಯು ನಿರ್ಣಯದಂತೆ ವರ್ಗಾಯಿಸಬಹುದು, ಇಲ್ಲದ ಪಕ್ಷದಲ್ಲಿ ಮೀಸಲು ನಿಧಿಗೆ ವರ್ಗಾವಣೆಯಾಗುತ್ತದೆ.

06. ಮಹಿಳಾ ಸಹಕಾರಿಯಲ್ಲಿಯ 'ಪುರುಷ ಸಹ ಸದಸ್ಯ'ರನ್ನು ಏನು ಮಾಡಬೇಕು? ಅವರಿಂದ ಪಡೆದ ಠೇವಣಿ ಹಾಗೂ ನೀಡಿದ ಸಾಲಗಳನ್ನು ನಿಭಾಯಿಸುವುದು ಹೇಗೆ?

ಉತ್ತರ : ಪ್ರಸ್ತುತ ಸೌಹಾರ್ದ ಅಧಿನಿಯಮದಲ್ಲಿ ಸಹಸದಸ್ಯರ ಪ್ರಾವದಾನವನ್ನು ಕೈಬಿಡಲಾಗಿದೆ. ಅಂತಹ ಸಹಸದಸ್ಯರು ಸದಸ್ಯತ್ವವನ್ನು

ಪಡೆಯಲು ಅರ್ಹತೆಯನ್ನು ಹೊಂದಿದ್ದರೆ ಮತ್ತು ಸದಸ್ಯತ್ವವನ್ನು ಪಡೆಯಲು ಇಚ್ಚೆ ಹೊಂದಿದ್ದಲ್ಲಿ ಅಂತಹ ಸಹಸದಸ್ಯರು ಸಹಕಾರಿಯ ಸದಸ್ಯರಾಗಿ ಸೇರಿಸಿಕೊಳ್ಳಲು ಅವಕಾಶವಿರುತ್ತದೆ.

ಮಹಿಳಾ ಸಹಕಾರಿಯಲ್ಲಿ ಪುರುಷರನ್ನು ಸದಸ್ಯರನ್ನಾಗಿಸಿ ಸೇರಿಸಿಕೊಳ್ಳಲು ಅವಕಾಶವಿದ್ದಲ್ಲಿ, ಅಂತಹ ಪುರುಷ ಸಹಸದಸ್ಯರನ್ನು ಸಹಕಾರಿಯ ಸದಸ್ಯರಾಗಿ ಸೇರಿಸಿಕೊಳ್ಳಲು ಅವಕಾಶವಿರುತ್ತದೆ ಮತ್ತು ಅವರಿಂದ ಪಡೆದ ಠೇವಣಿ ಹಾಗೂ ನೀಡಿದ ಸಾಲಗಳನ್ನು ಮುಂದುವರಿಸಲು ಅವಕಾಶವಿರುತ್ತದೆ. ಇಲ್ಲದ ಪಕ್ಷದಲ್ಲಿ ಅಂತಹ ಸದಸ್ಯರನ್ನು ಸದಸ್ಯತ್ವದಿಂದ ಕೈಬಿಡಬೇಕು.

07. ಜಿಲ್ಲಾ ಮಟ್ಟದ ಸಹಕಾರಿಗಳ ನಿರ್ದೇಶಕರ ಸಂಖ್ಯೆ ಎಷ್ಟು? (ಸಹಕಾರಿಗಳ ನಿರ್ದೇಶಕರ ಸಂಖ್ಯೆ– ಜಿಲ್ಲಾ ಮಟ್ಟಕ್ಕಿಂತ ಕೆಳಗಿನ ಸಹಕಾರಿ– 17, ತಾಲ್ಲೂಕು ಮಟ್ಟ –13, ಜಿಲ್ಲಾ ವ್ಯಾಪ್ತಿ ಮೀರಿದ –17)

ಉತ್ತರ : ಸೌಹಾರ್ದ ಅಧಿನಿಯಮ ಕಲಂ 24(ಸಿ)ರಡಿ ತಾಲ್ಲೂಕನ್ನು ಮೀರಿದ ಆದರೆ ಜಿಲ್ಲೆಯನ್ನು ಮೀರದ ಪ್ರದೇಶಕ್ಕೆ ವ್ಯಾಪಿಸಿದರೆ, ನಿರ್ದೇಶಕರ ಸಂಖ್ಯೆ ಹದಿನೈದು ಇರತಕ್ಕದ್ದು ಎಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಜಿಲ್ಲಾ ಮಟ್ಟದ ಸಹಕಾರಿಗಳ ನಿರ್ದೇಶಕರ ಸಂಖ್ಯೆ ಹದಿನೈದು ಇರತಕ್ಕದ್ದು.

08. ಹಳೆಯ ಕೊರತೆ ನಿಭಾವಣೆ ನಿಧಿಯನ್ನು ಉಪವಿಧಿಯಲ್ಲಿ ಈಗಲೂ ಮುಂದುವರಿಸಬಹುದೇ ಅಥವಾ ಹೊಸದಾಗಿ ಸಾಮಾನ್ಯ ಸಭೆಯ ಒಪ್ಪಿಗೆ ಪಡೆದು ರೂಪಿಸಿಕೊಳ್ಳಬೇಕೆ?

ಉತ್ತರ : ಪ್ರಸ್ತುತ ಸೌಹಾರ್ದ ಅಧಿನಿಯಮದಲ್ಲಿ ಕೊರತೆ ನಿಭಾವಣೆ ನಿಧಿಯ ಪ್ರಾವದಾನವನ್ನು ಕೈಬಿಡಲಾಗಿದೆ. ಈಗಾಗಲೇ ಸಹಕಾರಿಗಳು ತಮ್ಮ ಉಪವಿಧಿಯಲ್ಲಿ ಕೊರತೆ ನಿಭಾವಣೆ ನಿಧಿಯನ್ನು ರಚಿಸಿಕೊಂಡಿದ್ದು, ಸಹಕಾರಿಯ ಸಾಮಾನ್ಯಸಭೆಯ ಅನುಮೋದನೆ ಪಡೆಯುವ ಮೂಲಕ ಸದರಿ ಪ್ರಾವದಾನವನ್ನು ಮುಂದುವರಿಸಬಹುದಾಗಿದೆ.

09. ಇದುವರೆಗಿನ ಕೊರತೆ ನಿಭಾವಣಾ ನಿಧಿಯನ್ನು ವ್ಯವಹಾರಕ್ಕೆ ಕಾರ್ಯಾಚರಣೆಗೆ ಬಳಸಬಹುದೇ? ಇದುವರೆಗಿನ ಕೊರತೆ ನಿಭಾವಣಾ ನಿಧಿಯನ್ನು ಏನು ಮಾಡಬೇಕು?

ಉತ್ತರ : ಸೌಹಾರ್ದ ಅಧಿನಿಯಮ ಕಲಂ 32ಎ ರಲ್ಲಿದ್ದ ಕೊರತೆ ನಿಭಾವಣೆ ನಿಧಿಯನ್ನು ಪ್ರಸ್ತುತ ಕೈಬಿಡಲಾಗಿದ್ದು, ಇದುವವರೆಗೆ ಹಂಚಿಕೆ ಮಾಡಿರುವ ಕೊರತೆ ನಿಭಾವಣೆ ನಿಧಿಯನ್ನು ಸಹಕಾರಿಯ ಸಾಮಾನ್ಯ ಸಭೆಯ ಅನುಮೋದನೆ ಪಡೆದು ಸಹಕಾರಿಯ ಇತರ ನಿಧಿಗಳಿಗೆ ವರ್ಗಾಯಿಸಬಹುದಾಗಿದೆ. ಅಂತಹ ನಿಧಿಯನ್ನು ಸಹಕಾರಿಯ ವ್ಯವಹಾರ ಕಾರ್ಯಚರಣೆಗೆ ಬಳಸುವುದು ಸೂಕ್ತವಲ್ಲ.

10. 2012–13ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕಳೆದ ಸಾಮಾನ್ಯ ಸಭೆಯಲ್ಲಿ ನೇಮಕಗೊಂಡಿರುವ ಲೆಕ್ಕಪರಿಶೋಧಕರು ನಡೆಸಬಹುದೆ?

ಉತ್ತರ : ನಡೆಸಬಹುದು. ಸೌಹಾರ್ದ ಅಧಿನಿಯಮ ತಿದ್ದುಪಡಿಗೂ ಪೂರ್ವದಲ್ಲಿ ಮತ್ತು ನಂತರದಲ್ಲೂ ಲೆಕ್ಕಪರಿಶೋಧಕರನ್ನು ನೇಮಿಸುವ ಅಧಿಕಾರ ಸಾಮಾನ್ಯಸಭೆಗೆ ಇರುವುದರಿಂದ ಯಾವುದೇ ಸಹಕಾರಿಯು ತಮ್ಮ ಹಿಂದಿನ ಸಾಮಾನ್ಯಸಭೆಯಲ್ಲಿ ಸಂಯುಕ್ತ ಸಹಕಾರಿಯು ಸಿದ್ದಪಡಿಸಿರುವ ಪಟ್ಟಿಯಿಂದ 2012–13ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸಿಕೊಂಡಲ್ಲಿ ಅಂತಹ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆಯನ್ನು ನಡೆಸಲು ಅವಕಾಶವಿರುತ್ತದೆ.

11. ತಜ್ಞರು ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕೇ?

ಈಗಾಗಲೇ ಮಂಡಲಿಯಲ್ಲಿ ಇದ್ದಲ್ಲಿ ಮತ್ತೆ ತೆಗೆದುಕೊಳ್ಳಬೇಕೇ?

(a) ತಜ್ಞರು ಸಹಕಾರಿಯ ಸದಸ್ಯರಾಗಬಹುದೇ?

(b) ಪದಾಧಿಕಾರಿ ಚುನಾವಣೆಗೆ ಯಾ ಆಡಳಿತ ಮಂಡಳಿ ಚುನಾವಣೆಗೆ ಸದಸ್ಯರಾಗಿ ಸ್ಪರ್ಧಿಸಬಹುದೇ?

(c) ಕೋರಂ ಸಂಖ್ಯೆ ಪರಿಗಣಿಸುವಾಗ ತಜ್ಞರನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಹುದೇ? ತಜ್ಞರಿಗೆ ಕನಿಷ್ಠ ವ್ಯವಹಾರ ಮತ್ತು ನಿರ್ದೇಶಕರ ಅನರ್ಹತೆ ನಿಯಮಗಳು ಪರಿಗಣಿಸಲ್ಪಡುತ್ತದೆಯೇ?

(d) ಬಾಹ್ಯ ತಜ್ಞರು ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಇರದಿದ್ದರೆ ಅಥವಾ ಸೇರಲು ಒಪ್ಪದಿದ್ದರೆ ಏನು ಮಾಡಬೇಕು?

(e) ಒಬ್ಬ ತಜ್ಞ ಎಷ್ಟು ಸಹಕಾರಿಗಳಿಗೆ ನಿರ್ದೇಶಕನಾಗಬಹುದು?

ಉತ್ತರ : ಸೌಹಾರ್ದ ಅಧಿನಿಯಮ ಕಲಂ 24ರಲ್ಲಿ ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಅಧಿಕಾರವುಳ್ಳವರಾಗಿ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

(a) ತಜ್ಞರು ಸಹಕಾರಿಯ ಕಾರ್ಯವ್ಯಾಪ್ತಿಯಲ್ಲೇ ಇರಬೇಕೆಂಬ ನಿರ್ಬಂದಗಳಿಲ್ಲ.

(b) ಮಂಡಲಿಯಲ್ಲಿ ತಜ್ಞರು ಇದ್ದರೂ ಮಂಡಲಿ ಸದಸ್ಯರ ಸಂಖ್ಯೆಗೆ ಹೊರತುಪಡಿಸಿ ಇಬ್ಬರು ತಜ್ಞರನ್ನು ಸೇರಿಸಬೇಕು. ತಜ್ಞರು ಸಹಕಾರಿಯ ಸದಸ್ಯರಾಗಬೇಕೆಂಬ ನಿರ್ಬಂದವಿಲ್ಲ. ತಜ್ಞರು ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ ಎಂದಿರುತ್ತದೆ.

(c) ತಜ್ಞರನ್ನು ಕೋರಂ ಸಂಖ್ಯೆಗೆ ಪರಿಗಣಿಸತಕ್ಕದ್ದಲ್ಲ. ತಜ್ಞರಿಗೆ ಕನಿಷ್ಠ ವ್ಯವಹಾರ ಮತ್ತು ನಿರ್ದೇಶಕರ ಅನರ್ಹತೆಯ ಪ್ರಾವದಾನಗಳು

ಅನ್ವಯಿಸುವುದಿಲ್ಲ.

(d) ತಜ್ಞರು ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಅಥವಾ ಸೇರಲು ಒಪ್ಪದಿದ್ದರೂ, ಒಪ್ಪಿಗೆ ಇರುವ ಇಬ್ಬರು ತಜ್ಞರನ್ನು ಸೇರಿಸುವುದು ಕಡ್ಡಾಯ.

(e) ಒಬ್ಬ ತಜ್ಞ ಎಷ್ಟು ಸಹಕಾರಿಗಳಿಗೆ ನಿರ್ದೇಶಕನಾಗಬಹುದು ಎಂಬುದರ ಕುರಿತು ಪ್ರಾವದಾನವಿಲ್ಲದಿದ್ದರೂ ಸಹಕಾರಿಯ ಹಿತದೃಷ್ಟಿಯಿಂದ ತಜ್ಞನು ಒಂದಕ್ಕಿಂತ ಹೆಚ್ಚಿನ ಸಹಕಾರಿಯಲ್ಲಿ ಸೇವೆ ಸಲ್ಲಿಸುವುದು ಸೂಕ್ತವಲ್ಲ.

12. ಒಬಿಸಿ ಮಹಿಳೆಯೇ ಆದಲ್ಲಿ – ಯಾವ ಸ್ಥಾನಕ್ಕೆ ಸ್ಪರ್ಧಿಸಬೇಕು? ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಸ್ಪರ್ಧಿಸಬಹುದೇ?

2 ಸ್ಥಾನದಲ್ಲೂ ಆಯ್ಕೆಯಾದಲ್ಲಿ ಒಂದನ್ನು ಉಳಿಸಿಕೊಂಡುಇನ್ನೊಂದನ್ನು ರಿಕ್ತವಾಗಿ ಇಡಬಹುದೇ? (ಎರಡು ಸ್ಥಾನ ಗೆದ್ದಲ್ಲಿ ಒಂದನ್ನು ಮಾತ್ರ ಉಳಿಸಿಕೊಳ್ಳಬೇಕು, ಆದರೆ ಎರಡು ಸ್ಥಾನಗಳಿಗೆ ಸ್ಪರ್ಧಿಸಲು ಯಾ ನಾಮಪತ್ರ ಸಲ್ಲಿಸಲು ನಿರ್ಬಂದವೇನು ಇಲ್ಲ ಅಲ್ಲವೇ?)

ಉತ್ತರ : ಒಬಿಸಿ ಮಹಿಳೆಯು ಹಿಂದುಳಿದ ವರ್ಗ, ಮಹಿಳೆ ಮತ್ತು ಸಾಮಾನ್ಯವರ್ಗ ಇವುಗಳಲ್ಲಿ ಯಾವುದಾದರೂ ಒಂದು ಸ್ಥಾನಕ್ಕೆ ಸ್ಪರ್ಧಿಸಬಹುದಾಗಿದೆ. ಯಾವ ಸದಸ್ಯನೂ ಅಥವಾ ಡೆಲಿಗೇಟನೂ ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ ಅಭ್ಯರ್ಥಿಯಾಗಿರತಕ್ಕದ್ದಲ್ಲ ಹಾಗೂ ಯಾವ ಸದಸ್ಯನೂ ಅಥವಾ ಡೆಲಿಗೇಟನೂ ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ. ಆದ್ದರಿಂದ ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚಿನ ಸ್ಥಾನಕ್ಕೆ ಸ್ಪರ್ಧಿಸಲು ಅವಕಾಶವಿರುವುದಿಲ್ಲ.

13. ಪ್ರಾತಿನಿಧಿಕ ಸಾಮಾನ್ಯ ನಿಕಾಯ ಎಂದರೇನು? ಅದನ್ನು ರಚಿಸಿಕೊಳ್ಳುವುದು ಕಡ್ಡಾಯವೇ? ರಚಿಸಿಕೊಳ್ಳುವ ವಿಧಾನ ಯಾವುದು?

ಉತ್ತರ : ಸೌಹಾರ್ದ ಅಧಿನಿಯಮ ಕಲಂ 23ಬಿರಡಿ ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಸಭೆಗೆ ಅವಕಾಶ ಕಲ್ಪಿಸಲಾಗಿದೆ. ಯಾವುದೇ ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯ ಸದಸ್ಯತ್ವದ ಸಂಖ್ಯೆಯು ಮೂರು ಸಾವಿರಕ್ಕೆ ಹೆಚ್ಚಿದ್ದಲ್ಲಿ ಅಥವಾ ಅದರ ಕಾರ್ಯಕ್ಷೇತ್ರವು ಒಂದು ತಾಲ್ಲೂಕಿಗಿಂತ ಹೆಚ್ಚಾಗಿದ್ದಲ್ಲಿ ಅಂಥ ಸಹಕಾರಿಯು ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸಿಕೊಳ್ಳಲು ಅವಕಾಶವಿರುತ್ತದೆ. ಅಂತಹ ಸಹಕಾರಿಗಳು ಸಾಮಾನ್ಯಸಭೆಯ ಅನುಮೋದನೆಯನ್ನು ಪಡೆದು ಉಪವಿಧಿಯಲ್ಲಿ ಪ್ರಾವದಾನ ಮಾಡಿಕೊಳ್ಳುವ ಮೂಲಕ ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸಲು ಅವಕಾಶವಿರುತ್ತದೆ. ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ರಚಿಸಿಕೊಳ್ಳುವುದು ಕಡ್ಡಾಯವಲ್ಲ. ಪ್ರಾತಿನಿಧಿಕ ಸಾಮಾನ್ಯ ನಿಕಾಯವನ್ನು ನಿಯಮದಲ್ಲಿ ತಿಳಿಸಿರುವ ವಿಧಾನದಲ್ಲಿ ರಚಿಸಿಕೊಳ್ಳಬೇಕಾಗುತ್ತದೆ. ನಿಯಮವು ರಚನೆಯ ಹಂತದಲ್ಲಿರುವುದರಿಂದ ಈ ಕುರಿತು ಮುಂದಿನ ದಿನಗಳಲ್ಲಿ ವಿವರವಾಗಿ ತಿಳಿಸಲಾಗುವುದು.

14. ಪ್ರಸ್ತುತ ಆಡಳಿತ ಮಂಡಳಿ ಸಂಖ್ಯೆ 9 ಇದ್ದು ತಾಲ್ಲೂಕು ಮಟ್ಟಕ್ಕಿಂತ ಕೆಳಗಡೆ ಇರುವುರಿಂದ ಯಾವುದೇ ಕಾರಣದಿಂದಾಗಿ ಸಹಕಾರಿಯಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ ಆಡಳಿತ ಮಂಡಳಿಯಲ್ಲಿ ಕೊರಂ ಕೊರತೆ ಉಂಟಾಗಬಹುದೆ?

ಉತ್ತರ : ಪ್ರಸ್ತುತ ಉಪವಿಧಿ ತಿದ್ದುಪಡಿ ಮಾಡಿಕೊಳ್ಳುವುದರಿಂದ ಕೆಲವೊಂದು ಸಹಕಾರಿಗಳಲ್ಲಿ ನಿರ್ದೇಶಕರ ಸಂಖ್ಯೆಯ ಬದಲಾವಣೆಯಿಂದಾಗಿ ಕೋರಂ ಕೊರತೆ ಉಂಟಾಗುವ ಸಂಭವವಿರುವುದರಿಂದ ಉಪವಿಧಿಯಲ್ಲಿ ಆಡಳಿತ ಮಂಡಲಿಯ ಕೋರಂ ಕುರಿತಂತೆ ಸಹಕಾರಿಯ ಮಂಡಲಿಯು ಮುಂದಿನ ಚುನಾವಣೆಯವರೆಗೆ ಮಂಡಲಿಯ ಸಂಖ್ಯೆ ಮತ್ತು ಕೋರಂನ ಪ್ರಾವದಾನವು ಪ್ರಸ್ತತ ಇರುವಂತೆ ಮುಂದುವರಿಯಬೇಕೆಂಬ ಟಿಪ್ಪಣಿ ಸೇರಿಸಬೇಕು.

15. ಚುನಾವಣಾ ದಿನಾಂಕದಿಂದ ಪೂರ್ಣ 5 ವರ್ಷಗಳು ಎಂದಿರುವ ಹಿನ್ನಲೆಯಲ್ಲಿ – ಹಿಂದಿನ ಚುನಾವಣೆ ಮಾರ್ಚ 25ಕ್ಕೆ ಆಗಿದೆ, ಇಂದಿನ ಚುನಾವಣೆ ಪೆಬ್ರವರಿ 20ಕ್ಕೆ ಆಗಿದೆ. ಈ ಸಂದರ್ಬದಲ್ಲಿ ಯಾವ ಆಡಳಿತ ಮಂಡಳಿ ಅಧಿಕಾರದಲ್ಲಿರುತ್ತದೆ? ಯಾವುದಾದರೂ ಒಂದು ಆಡಳಿತ ಮಂಡಳಿಗೆ ಅಷ್ಟು ದಿನ ನಷ್ಟವಾದಂತಲ್ಲವೇ? ಪೂರ್ಣ 5 ವರ್ಷ ಎನ್ನುವುದು ತಪ್ಪಾಗುತ್ತದಲ್ಲವೇ?

ಉತ್ತರ : ಸೌಹಾರ್ದ ಅಧಿನಿಯಮ ಕಲಂ 26(1)ರಡಿ ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅನುವಾಗುವಂತೆ ಮಂಡಲಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸತಕ್ಕದ್ದು. ಸೌಹಾರ್ದ ಅಧಿನಿಯಮದಲ್ಲಿ ಪೂರ್ಣ 5 ವರ್ಷ ಎಂದು ಉಲ್ಲೇಖವಿರುವುದಿಲ್ಲ. ಮಂಡಲಿ ಸದಸ್ಯರು ಚುನಾವಣಾ ದಿನಾಂಕದಿಂದ 5 ವರ್ಷಗಳ ಪದಾವಧಿ ಹೊಂದಿರುತ್ತಾರೆ ಮತ್ತು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯದ ನಂತರದಲ್ಲಿ ಪದಧಾರಣ ಮಾಡಬೇಕೆಂದು ಇರುವುದರಿಂದ ಪ್ರತಿ ಆಡಳಿತ ಮಂಡಳಿಗೂ ಕೆಲವು ದಿನಗಳ ವ್ಯಾತ್ಯಾಸಗಳಾಗುತ್ತದೆ. ■

ಆದೇಶ ರದ್ದು

ಸಹಕಾರ ಸಂಘಗಳ ಉಪ ನಿಬಂಧಕರು ,ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿಯಿಂದ ಬಸವೇಶ್ವರ ಮಹಾಲಕ್ಷ್ಮಿ ವಿವಿದೋದ್ಧೆಶ ಸೌಹಾರ್ದ ಸಹಕಾರಿ ನಿ., ಇದರ ನೋಂದಣಿ ಸಲುವಾಗಿ ಮುಖ್ಯಪ್ರವರ್ತಕರಿಗೆ ಷೇರು ಸಂಗ್ರಹಿಸಲು ನೀಡಿದ್ದ ಅನುಮತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಡಿಆರ್‌ಬಿ–ಎನ್/ಸಿಬ್ಬಂದಿ/ಎಸ್1/ಆರ್‌ಜಿಎನ್/181/2011–12 ದಿನಾಂಕ : 07–03–2013ರಂದು ಹಿಂಪಡೆಯಲಾಗಿದೆ.

ಸಹಕಾರಿ ಸಂಸ್ಥೆಗಳಲ್ಲಿ ಸಂವಹನ

ಎಚ್. ಶಿವಕುಮಾರ್

ಚಾರ್ಟೆರ್ಡ್ ಅಕೌಂಟೆಂಟ್

'ಮಾತೆಂಬುದು ಜ್ಯೋತಿರ್ಲಿಂಗ' ಅಲ್ಲಮ ಪ್ರಭುವಿನ ವಚನವೊಂದರಲ್ಲಿ ಮೂಡಿ ಬಂದಿರುವ ಈ ನುಡಿಗಟ್ಟು ಕನ್ನಡದ ಅನುಭಾವ ಸಾಹಿತ್ಯದಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿರುವುದು ಅದರ ಅತ್ಯಂತ ಗಟ್ಟಿಯಾದ ಅಂತಸತ್ವದಿಂದಾಗಿ. ನಿಜಶರಣನೊಬ್ಬನ ಅಂತರಾಳದಿಂದ ಮತ್ತು ಅನುಭವ ನೆಲೆಯಿಂದ, ಜ್ಞಾನದ ಹಿನ್ನೆಲೆಯಿಂದ ಮೂಡಿ ಬರುವ ಮಾತುಗಳು ದೈವತ್ವವನ್ನು ಸಾಕಾರಗೊಳ್ಳುತ್ತವೆ ಎಂದು ಸ್ಥೂಲವಾದ ಅರ್ಥವನ್ನು ಕೊಡಬಲ್ಲ ಅಲ್ಲಮನ "ಮಾತೆಂಬುದು ಜ್ಯೋತಿರ್ಲಿಂಗ" ಎಂಬ ವಚನವಾಣಿ ಇಂದಿಗೂ ಮತ್ತು ಎಂದೆಂದಿಗೂ ಪ್ರಸ್ತುತ. ಕರ್ನಾಟಕ ಸೌಹಾರ್ದ ಸಹಕಾರಿಯು ಆಗಿಂದಾಗ್ಗೆ ನಡೆಸುತ್ತಾ ಬರುತ್ತಿರುವ ಸಂವಹನ ಮತ್ತು ಗುಣಮಟ್ಟ ನಿರ್ವಹಣೆ ತರಬೇತಿ ಶಿಬಿರಗಳಲ್ಲಿ ಸಂವಹನಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ಗಮನಿಸುತ್ತಾ ಬಂದಾಗ ಅಲ್ಲಮನ ಮಾತುಗಳ ಪ್ರಸ್ತುತತೆ ನಿಚ್ಚಳವಾಗುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅಧ್ಯಾಯ 10ರ 67ನೇ ಕಲಮಿನಲ್ಲಿ ಸಹಕಾರಿ ತತ್ವಗಳು ಯಾವುವು ಎಂದು ಹೇಳಲಾಗಿದೆ. ಸದರಿ 67ನೇ ಕಲಮಿನ ಉಪಕ್ರಮ ಸಂಖ್ಯೆ 5ರ ಪ್ರಕಾರ "ಸಹಕಾರಿಗಳ ಅಭಿವೃದ್ಧಿಗೆ ತಮ್ಮ ಪರಿಣಾಮಕಾರಿಯಾದ ಕೊಡುಗೆಯನ್ನು ನೀಡಲನುವಾಗುವಂತೆ ಸಹಕಾರಿಗಳು ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರಿಗೆ ಮತ್ತು ನೌಕರರಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತವೆ". ಹೀಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುವುದನ್ನು ಶಾಸನಬದ್ಧ ತತ್ವವನ್ನಾಗಿಸಿಕೊಂಡಿರುವ ಸೌಹಾರ್ದ ಸಹಕಾರಿಯು ನಿರಂತರವಾಗಿ ತರಬೇತಿ ಶಿಬಿರಗಳನ್ನು ಮತ್ತು ವಿಚಾರ ಸಂಕಿರಣಗಳನ್ನು ನಡೆಸುತ್ತಾ ಬಂದಿದೆ. ಈ ಎಲ್ಲಾ ಶಿಬಿರಗಳಲ್ಲಿ ಸಂವಹನಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಕಂಡು ಬರುತ್ತಿದೆ.

ಈಗಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಸಂವಹನ ಮತ್ತು ಅದರಲ್ಲೂ ಸಕಾಲಿಕ ಸಂವಹನ ಹೆಚ್ಚು ಪ್ರಸ್ತುತ. ಮೊಬೈಲು ದೂರವಾಣಿಯಲ್ಲಿ ನಡೆಸುವ ಸರಸ ಸಂಭಾಷಣೆಯಿಂದ ಹಿಡಿದು ಮಿಂಚಂಚೆಯ ಮೂಲಕ ಕಳುಹಿಸುವ ಸಂದೇಶಗಳು ಮತ್ತು ಬೋರ್ಡು ರೂಮಿನಲ್ಲಿ ನಡೆಯುವ ಮಹತ್ವದ ಚರ್ಚೆಗಳು ಸಂಸ್ಥೆಯ ಶ್ರೇಯೋಭಿವೃದ್ಧಿಗೆ ಕಾರಣವಾಗಬೇಕಾದರೆ ಪರಿಣಾಮಕಾರಿಯಾದ ಸಂವಹನ ಸಂಘಟನೆಯ ಉದ್ದಗಲಕ್ಕೂ ಹರಡಿಕೊಳ್ಳಬೇಕಾಗುತ್ತದೆ.

ಪರಿಣಾಮಕಾರಿಯಾದ ಸಂವಹನ ಶಕ್ತಿ, ಸಾಧ್ಯವಾಗಬೇಕಾಗಿದ್ದರೆ ಅದಕ್ಕೆ ಸದಸ್ಯರು, ಚುನಾಯಿತ ಪ್ರತಿನಿಧಿಗಳು, ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರಿಗೆ ಕಾಲದಿಂದ ಕಾಲಕ್ಕೆ ಸೂಕ್ತ ತರಬೇತಿ ನೀಡಬೇಕಾಗುತ್ತದೆ. ಸಂವಹನ ಕೌಶಲ್ಯವನ್ನು ಉದ್ದೀಪನಗೊಳಿಸುವಂತ ನುರಿತ ತರಬೇತುದಾರರು ಮತ್ತು ವೃತ್ತಿಪರರು ಈಗ ವಿಶ್ವದೆಲ್ಲಡೆ ಲಭ್ಯವಾಗುತ್ತಿದ್ದಾರೆ. ಸಮಯ ಪ್ರಜ್ಞೆಯಿಂದ ಸಕಾಲದಲ್ಲಿ ಅಭಿಪ್ರಾಯ ಮಂಡಿಸುವುದು, ಒಮ್ಮತದಲ್ಲಿ ಮೂಡಿ ಬಂದ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಸಮರ್ಥವಾಗಿ ನಿರೂಪಿಸುವುದು ಒಳ್ಳೆಯ ಸಂವಹನದ ಲಕ್ಷಣಗಳು. "ಮಾತಿಗೆ ಬಾರದ ವಸ್ತು ಬಹಳಿದ್ದರೇನು? ಹೋತನ ಕೊರಳೊಳಗೆ ಮೊಲೆ ಇದ್ದರೇನು?" ಎಂಬ ಪುರಂದರದಾಸರ ದಾಸವಾಣಿಯಂತೆ ಸಮಯಕ್ಕೆ ಸರಿಯಾಗಿ ದಕ್ಕದ ಸಂವಹನ ಕೌಶಲ್ಯ ವ್ಯರ್ಥವಾಗುತ್ತದೆ.

ಕನ್ನಡ ಸಾಹಿತ್ಯದ ಎರಡು ಅಭೂತಪೂರ್ವ ಪ್ರಾಕಾರಗಳಾದ ದಾಸವಾಣಿ ಮತ್ತು ವಚನಗಳು ಅತ್ಯಂತ ಪರಿಣಾಮಕಾರಿಯಾಗಿ ಜನರನ್ನು ಮುಟ್ಟಿರುವುದು ಮತ್ತು ಇಂದಿಗೂ ಪ್ರಸ್ತುತವಾಗಿರುವುದು ಅವುಗಳ ಪ್ರಖರವಾದ ಸಂವಹನಶೀಲತೆಯಿಂದಾಗಿ. ಶರಣರು ಮತ್ತು ದಾಸರು ತಾವು ಜನರಿಗೆ ಹೇಳಬೇಕಾಗಿದ್ದ ಆಧ್ಯಾತ್ಮದ ಮತ್ತು ಅನುಭಾವದ ವಿಚಾರಗಳನ್ನು ಸರಳವಾಗಿ ಸ್ಪಷ್ಟವಾಗಿ ಹೇಳಿದ್ದರಿಂದಲೇ ದಾಸರ ಪದಗಳು ಮತ್ತು ಶರಣರ ವಚನಗಳು ಇಂದಿಗೂ ಮನೆ ಮಾತಾಗಿವೆ. "ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು" ಎಂದ ಬಸವಣ್ಣ, ಶರಣರು ತಮ್ಮ ಅಭಿಪ್ರಾಯಗಳನ್ನು ಸಮರ್ಥವಾಗಿ ಮಂಡಿಸಲೆಂದೇ "ಅನುಭವ ಮಂಟಪ" ಎಂಬ ವೇದಿಕೆಯನ್ನು ವ್ಯವಸ್ಥೆಮಾಡಿದ್ದನೆಂಬ ಚರಿತ್ರೆಯ ವಿವರಗಳು ಆ ಕಾಲದಲ್ಲಿ ಶರಣರು ಸಂವಹನಕ್ಕೆ ನೀಡಿದ್ದ ಪ್ರಾಮುಖ್ಯತೆಯನ್ನು ಪ್ರಚುರಪಡಿಸುತ್ತದೆ.

ತಮ್ಮ ನೂರಾರು ಕೀರ್ತನೆಗಳಲ್ಲಿ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದ ದಾಸಶ್ರೇಷ್ಠರು ದಾಸಪದಗಳಲ್ಲಿ ಭಾಷೆಯನ್ನು ಅಧ್ಭುತವಾಗಿ ಬಳಸುತ್ತಾ, ಅದನ್ನೇ ಸಂವಹನ ಸಾಧನವಾಗಿಸಿಕೊಂಡು "ಭಾಷೆ ಹೀನರ ಸಂಗ ಅಭಿಮಾನ ಭಂಗ ಬೇಸತ್ತು ಬೇಲಿಯ ಮೇಲೊರಗಿದಂತೆ" ಎಂದು ಹೇಳುತ್ತಾ ಜೀವನದಲ್ಲಿ ಭಾಷೆಯ ಬಳಕೆ ಮತ್ತು ಸಂವಹನದ ಬಗೆಗಿನ ಶಿಸ್ತನ್ನು ಪ್ರತಿಪಾದಿಸಿದ್ದಾರೆ.

"ತನ್ನ ವಚನ ತನಗೆ ಹಗೆಯಾದಡೆ ಅದೇ ಪ್ರಳಯವಲ್ಲಾ!" ಎಂದು ಪ್ರಾಸಂಗಿಕವಾಗಿ ಅಲ್ಲಮನು ಆಡಿದ ಮಾತು ವಿರೋಧಾಭಾಸದ ಹೇಳಿಕೆಗಳಲ್ಲಿ ವ್ಯಕ್ತಿತ್ವ ವಿನಾಶಗೊಳ್ಳುವ ಅಪಾಯವನ್ನು ಮತ್ತು ಎಚ್ಚರಿಕೆಯನ್ನು ಗಮನಿಸಬಹುದು. ಆಳವನು ನೋಡಿ ಬಗೆದಾಡುವಾ ಮಾತಿಂಗೆ ರೂಢಿಯರ್ಥವದೊಂದು ಗೂಢಾರ್ಥವೊಂದು ಎಂದು ಕವಿಯೊಬ್ಬರು ಹೇಳುವ ಅನುಭವದ ನುಡಿಯಲ್ಲಿ ಸಂವಹನದ ಎಲ್ಲಾ ಮಗ್ಗಲುಗಳು ಮನೆ ಮಾಡಿದಂತೆ ತೋರುತ್ತದೆ. ಸೌಹಾರ್ದ ಸಹಕಾರಿಯು ಏರ್ಪಡಿಸುವ ಎಲ್ಲಾ ತರಬೇತಿ ಶಿಬಿರಗಳಲ್ಲಿ ಸಂವಹನ ಕುಶಲತೆ ಅದು ಮೌಖಿಕವಾಗಿರಲಿ ಅಥವಾ ಲಿಖಿತ ರೂಪದಲ್ಲಿರಲಿ ಪ್ರಾಶಸ್ತ್ಯ ಪಡೆದಿರುವುದು ಇಂದಿನ ಸನ್ನಿವೇಶದಲ್ಲಿ ಅತ್ಯಂತ ಪ್ರಸ್ತುತವಾಗಿದೆ.

ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಕಾಯಿದೆ ಕಲಂ 80 P (2) (a) (i) ಅನ್ವಯಿಸುತ್ತದೆ

"ಪತ್ತಿನ ಸೌಹಾರ್ದ ಸಹಕಾರಿ/ ಸಹಕಾರ ಸಂಘಗಳಿಗೆ ಸಿಹಿ ಸುದ್ದಿ"

ಮಧುಕರ ಹೆಗಡೆ
ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು.
Ph: 9448151454,
Email:hegdemadhu1@gmail.com

ಆರ್ಥಿಕ ವರ್ಷ 2012-13 ಈಗ ತಾನೇ ಮುಕ್ತಾಯವಾಗಿದ್ದು ಎಲ್ಲಾ ಸೌಹಾರ್ದ ಸಹಕಾರಿಗಳು ಉತ್ತಮ ಬೆಳವಣಿಗೆಯನ್ನು ಸಾಧಿಸಿರ ಬಹುದೆಂಬ ವಿಶ್ವಾಸದೊಂದಿಗೆ ಇತ್ತೀಚಿನ ಬೆಳವಣಿಗೆಯ ಬಗ್ಗೆ ಮತ್ತು ಅದರ ಪರಿಣಾಮದ ಬಗ್ಗೆ ಸಂಕ್ಷಿಪ್ತವಾದ ವರದಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ.

ಕಳೆದ ಒಂದು ವರ್ಷದಿಂದ ಪತ್ತಿನ ಸಹಕಾರಿಗಳು ಮತ್ತು ಸಹಕಾರ ಸಂಘಗಳು ಗೊಂದಲದಲ್ಲಿ ಸಿಲುಕಿಕೊಂಡಿದ್ದು, ಹಲವಾರು ಪತ್ತಿನ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆದಾಯ ತೆರಿಗೆ ಪಾವತಿಸಲು ನೋಟೀಸುಗಳನ್ನು ನೀಡಲಾಗುತ್ತಿದೆ. ಹಾಗಾಗಿ ಪತ್ತಿನ ಸಹಕಾರಿಗಳು ಸಂಕಷ್ಟದಲ್ಲಿ ಸಿಲುಕಿದ್ದು, ತಮ್ಮ ನಿವ್ವಳ ಲಾಭದ ಶೇಕಡಾ 30.90 ತೆರಿಗೆ ನೀಡುವಂತೆ ರಾಜ್ಯದ ಮತ್ತು ದೇಶದ ನಾನಾ ಕಡೆಗಳಿಂದ ಆದಾಯ ತೆರಿಗೆ ಇಲಾಖೆಯಿಂದ ನೋಟೀಸುಗಳನ್ನು ಎದುರಿಸುವ ಪರಿಸ್ಥಿತಿಯುಂಟಾಗಿದೆ. ಪತ್ತಿನ ಸಹಕಾರಿಗಳಿಗೆ ಆದಾಯ ತೆರಿಗೆ ಕಾಯಿದೆ ಕಲಂ 80 P (2) (a) (i) ಅನ್ವಯಿಸುವುದಿಲ್ಲ ಹಾಗಾಗಿ ಅಂತಹ ಸಹಕಾರಿಗಳು ತಮ್ಮ ನಿವ್ವಳ ಲಾಭದ ಶೇಕಡಾ 30.90ರಷ್ಟು ತೆರಿಗೆ ಪಾವತಿಸಬೇಕೆಂದು ಆದಾಯ ತೆರಿಗೆ ಇಲಾಖೆಗಳಿಂದ ನೋಟಿಸನ್ನು ಪಡೆಯುತ್ತಿದ್ದು ಅಂತಹ ಸಂಸ್ಥೆಗಳು ಬಹಳ ಒತ್ತಡದಲ್ಲಿ ಸಿಲುಕಿಕೊಂಡಿವೆ.

ಹಿನ್ನೆಲೆ : ಹಣಕಾಸು ಕಾಯಿದೆ, 2006 (Finance Act, 2006), ಆದಾಯ ತೆರಿಗೆ ಕಾಯಿದೆ ಕಲಂ 2(24) ಮತ್ತು ಕಲಂ 80 P (2) ಯಲ್ಲಿ ಬದಲಾವಣೆಯನ್ನು ಮಾಡಿದ್ದು, ದಿನಾಂಕ 01.04.2007 ರಿಂದ ಎಲ್ಲಾ ಸಹಕಾರಿ ಬ್ಯಾಂಕುಗಳನ್ನು ಆದಾಯ ತೆರಿಗೆ ಮಿತಿಗೆ ಒಳಪಡಿಸಿದ್ದು, ಸನ್ 2006-07 ರಿಂದ ಎಲ್ಲಾ ಸಹಕಾರಿ ಬ್ಯಾಂಕುಗಳು ಆದಾಯ ತೆರಿಗೆಯನ್ನು ಪಾವತಿಸುತ್ತಿವೆ. ಆದರೆ ಇತ್ತೀಚಿನ ಬೆಳವಣಿಗೆಯಲ್ಲಿ, ಪತ್ತಿನ ಸಹಕಾರಿಗಳು ಬ್ಯಾಂಕಿಂಗ್ ವ್ಯವಹಾರ ನಡೆಸುತ್ತಿವೆ ಎಂಬ ಕಾರಣಕ್ಕೆ ಅಂತಹ ಸಹಕಾರಿಗಳನ್ನು ಬ್ಯಾಂಕ್ ಎಂದು ಪರಿಗಣಿಸಿ ಆದಾಯ ತೆರಿಗೆ ಇಲಾಖೆಯವರು ಆದಾಯ ತೆರಿಗೆಯನ್ನು ಪಾವತಿಸುವಂತೆ ನೋಟೀಸ್ ಜಾರಿ ಮಾಡುತ್ತಿವೆ. ಇದು ರಾಜ್ಯದ ಮತ್ತು ದೇಶದ ಸಾವಿರಾರು ಪತ್ತಿನ ಸಹಕಾರಿಗಳಿಗೆ ತಲೆನೋವಾಗಿದ್ದ, ಅಂತಹ ಸಂಸ್ಥೆಗಳು ಭಯದಲ್ಲಿ ಕಾರ್ಯ ನಿರ್ವಹಿಸುವಂತಹ ಪರಿಸ್ಥಿತಿ ಉದ್ಭವವಾಗಿದೆ.

ಸಿಹಿ ಸುದ್ದಿ: ಮರುಭೂಮಿಯಲ್ಲಿ ಓಯಸಿಸ್ ಇದ್ದ ಹಾಗೆ, ದಿನಾಂಕ 28.03.2013 ರಂದು ಆದಾಯ ತೆರಿಗೆ ಆಯುಕ್ತರು (ಅಫೀಲ್ಸ್) – ಖಙ ಬೆಂಗಳೂರು ತಮ್ಮ ಆದೇಶ ಸಂಖ್ಯೆ ITA NO: 71-73/ ಂಅ – 3(1)/ CIT (A) - II/ 11-12ರಂತೆ ಆದೇಶ ಮಾಡಿದ್ದು, ಅದರಂತೆ "ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್" ಇದರ ಪರವಾಗಿ ಆದೇಶ ನೀಡಿದ್ದು, ಆ ಸಹಕಾರಿ ಬ್ಯಾಂಕ್ ಅಲ್ಲ ಅಂತ ಪರಿಗಣಿಸಿ, ಸಹ ಆಯುಕ್ತರು ಆದಾಯ ತೆರಿಗೆ ಇಲಾಖೆ 3(1) ಬೆಂಗಳೂರು ಅವರ ಆದೇಶವನ್ನು ರದ್ದುಗೊಳಿಸಿ, "ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್" ಸನ್ 2007-08, 2008-09 ಮತ್ತು 2010-11 ಈ ಮೂರು ವರ್ಷಗಳಿಗೂ ಆದಾಯ ತೆರಿಗೆ ಕಲಂ 80 P (2) (a) (i) ಅನ್ವಯಿಸುತ್ತದೆ ಅನ್ನುವ" ಮಹತ್ವದ ತೀರ್ಪನ್ನು ನೀಡಿರುತ್ತದೆ. ಇದೊಂದು ನಿಜವಾಗಲು ಪತ್ತಿನ ಸಹಕಾರಿಗಳಿಗೆ ಸಂತಸದ ಸುದ್ದಿಯೆಂದು ಭಾವಿಸೋಣ.

ಆಯುಕ್ತರು ತಮ್ಮ ಆದೇಶದಲ್ಲಿ 2006ರಲ್ಲಿ ಸೇರ್ಪಡಿಸಿದ ಕಾಯಿದೆ ಕಲಂ 80 P (4) ಪತ್ತಿನ ಸಹಕಾರಿಗಳಿಗೆ ಅನ್ವಯಿಸುವುದಿಲ್ಲ ಅದು ಬ್ಯಾಂಕುಗಳಿಗೆ ಮಾತ್ರ ಅನ್ವಯಿಸುತ್ತದೆ ಎಂಬ ತೆರಿಗೆದಾರರ ಪರವಾಗಿ ವಾದಿಸಿದವರ ವಾದವನ್ನು ಎತ್ತಿಹಿಡಿದಿದ್ದು ಇದೊಂದು ಮಹತ್ವದ ನಿರ್ಧಾರವಾಗಿದ್ದು ಇದರಿಂದ ಡೋಲಾಯಮಾನ ಸ್ಥಿತಿಯಲ್ಲಿರುವ ಇತರ ಪತ್ತಿನ ಸಹಕಾರಿಗಳಿಗೆ ಇದೊಂದು ಆಶಾ ಭಾವನೆಯನ್ನು ಮೂಡಿಸಲು ಸಹಕಾರಿಯಾಗುತ್ತದೆ.

ವಹಿಸಬೇಕಾದ ಎಚ್ಚರಿಕೆ :

- ಹಲವಾರು ಸೌಹಾರ್ದ ಪತ್ತಿನ ಸಹಕಾರಿಗಳು ತಮ್ಮ ತಮ್ಮ ಉಪವಿಧಿಗಳಲ್ಲಿ ಸದಸ್ಯರೇತರರೊಂದಿಗೆ ವ್ಯವಹಾರಕ್ಕೆ ಪ್ರಾವಧಾನ ಮಾಡಿಕೊಂಡಿದ್ದು, ಸದಸ್ಯರೇತರರೊಂದಿಗೆ ವ್ಯವಹಾರ ನಡೆಸುತ್ತಿದ್ದರೆ ಅಂತಹ ವ್ಯವಹಾರದಿಂದ ಬಂದ ಲಾಭಕ್ಕೆ ತೆರಿಗೆ ಪಾವತಿಸಬೇಕಾಗುತ್ತದೆ. ಹಾಗಾಗಿ ಸದಸ್ಯರೇತರರೊಂದಿಗಿನ ವ್ಯವಹಾರವನ್ನು ಕಡಿತಗೊಳಿಸುವುದು ಒಳ್ಳೆಯದು.
- ಆದಾಯ ತೆರಿಗೆ ರಿಟರ್ನ್‌ಗಳನ್ನು ಪ್ರತಿ ವರ್ಷ ಸಲ್ಲಿಸಬೇಕು.
- ಸಂಬಳ (192B), ಒಪ್ಪಂದ (Contract) (194 C), ಕಮೀಷನ್ (194 H), ಬಾಡಿಗೆ (194 I), ವೃತ್ತಿ (Professional) (194 J) ಮುಂತಾದ ಖರ್ಚುಗಳನ್ನು ಆದಾಯ ತೆರಿಗೆ ಕಾಯಿದೆ ಕಲಂನಲ್ಲಿ ನಿಗದಿಪಡಿಸಿದ ಗರಿಷ್ಠ ಮಿತಿಗಿಂತ ಹೆಚ್ಚು ಪಾವತಿಸುತ್ತಿದ್ದಲ್ಲಿ, ಅಂತಹ ಖರ್ಚುಗಳಿಗೆ ಮೂಲದಲ್ಲಿ ತೆರಿಗೆ ಕಡಿತಾಯ (TDS) ಮಾಡಬೇಕಾಗುತ್ತದೆ. ಮೂಲದಲ್ಲಿ ತೆರಿಗೆ ಕಡಿತಾಯ ಮಾಡದಿದ್ದಲ್ಲಿ ಅಂತಹ ಖರ್ಚುಗಳಿಗೆ ಆದಾಯ ತೆರಿಗೆ ವಿನಾಯಿತಿ ದೊರೆಯುವುದಿಲ್ಲ.
- ದೈನಂದಿನ ವ್ಯವಹಾರದಲ್ಲಿ ಅತ್ಯಂತ ಪಾರದರ್ಶಕತೆ ಅಳವಡಿಸಿಕೊಳ್ಳುವುದು ಅವಶ್ಯಕ.

ಈ ಆದೇಶದಿಂದ ಇಲ್ಲಿಯವರೆಗೆ ನಡೆಯುತ್ತಿರುವ ಊಹಾ-ಪೋಹ ಗಳಿಗೆ ತೆರೆ ಬೀಳಬಹುದೆಂಬ ಆಶಾಭಾವದೊಂದಿಗೆ ಮತ್ತು ಎಲ್ಲಾ ಪತ್ತಿನ ಸಹಕಾರಿಗಳು ಇದರ ಲಾಭ ಪಡೆದುಕೊಳ್ಳಲಿ ಎಂದು ಆಶಿಸೋಣ. ■

ಚುನಾವಣಾ ಪ್ರಣಾಳಿಕೆಯಲ್ಲಿ 'ಸಹಕಾರ' ಸೇರ್ಪಡೆಯಾದೀತೇ?

ಸಹಕಾರ ಪದ್ಧತಿ ಅನಾದಿ ಕಾಲದಿಂದ ನಡೆದು ಬಂದಿದೆ. ದೇಶದ ಸಹಕಾರಿ ಕಾಯ್ದೆಗೆ ಸರಿಸುಮಾರು ಒಂದು ಶತಮಾನದ ಇತಿಹಾಸ. ಸಹಕಾರಿ ರಂಗ ಈ ಅವಧಿಯಲ್ಲಿ ಹಂತ ಹಂತವಾಗಿ ಹಲವಾರು ಸುಧಾರಣೆಗಳನ್ನು ಕಂಡಿದೆ. ಇತ್ತೀಚಿಗಿನ 97ನೇ ಸಂವಿಧಾನ ತಿದ್ದುಪಡಿಯಿಂದಾಗಿ 'ಸಹಕಾರ'ಕ್ಕೆ ಮತ್ತಷ್ಟು ಮಹತ್ವ ಹಾಗೂ ಬಲಬಂದಿದೆ. ಇದರ ಹಿನ್ನೆಲೆಯಲ್ಲಿ ಕಾಯ್ದೆಗಳಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಆದರೂ ಸಹಕಾರದ ಬಲವರ್ಧನೆಗೆ ಹಲವು ಹೆಜ್ಜೆಗಳು ವಿವಿಧ ದಿಕ್ಕುಗಳಲ್ಲಿ ಮೂಡಿಬರಬೇಕು.

ಸಹಕಾರ ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರದ ವಿಷಯ. ಕರ್ನಾಟಕ ವಿಧಾನ ಸಭೆಗೆ ಸದ್ಯವೆ ಚುನಾವಣೆ ಸನ್ನಿಹಿತವಾಗಿದೆ. ಈ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಸಹಕಾರಕ್ಕೆ ಮಹತ್ವ ನೀಡಿ ಕೆಲವೊಂದು ಅಂಶಗಳನ್ನು ಅಳವಡಿಸಿ ಸಹಕಾರ ಸುಧಾರಣೆಗೆ ನಾಂದಿ ಹಾಡಬಹುದೇ?



ರಾಧಾಕೃಷ್ಣ ಕೋಟೆ

Rkkote26@gmail.com

1. ಖಾಸಗೀಕರಣದ ಸಂದರ್ಭ ಸಹಕಾರ ರಂಗಕ್ಕೆ ಆದ್ಯತೆ : ಜಗತ್ತಿನ ಆರ್ಥಿಕ ಕುಸಿತದ ಸಂದಿಗ್ಧ ಕಾಲದಲ್ಲಿ ಸಹಕರಿ ರಂಗ ಹೊರತು ಇತರ ಎಲ್ಲಾ ಆರ್ಥಿಕ ಕ್ಷೇತ್ರಗಳು ಆಘಾತ ಅನುಭವಿಸಿವೆ. ಸಹಕಾರಿ ಕ್ಷೇತ್ರ ಬಲಾಢ್ಯ ವ್ಯವಸ್ಥೆ ಎಂಬುದು ಇದರಿಂದ ಶ್ರುತಪಟ್ಟಿದೆ. ಇಂದು ಕೃಷಿ, ಕೈಗಾರಿಕೆ, ಉದ್ದಿಮೆ, ಅವಶ್ಯಕ ಸೇವೆಗಳು ಸರ್ಕಾರಿ ವ್ಯವಸ್ಥೆಯಿಂದ ಖಾಸಗೀ ವ್ಯವಸ್ಥೆಗೆ ಹೊರಳುತ್ತಿವೆ. ಈ ಸಂದರ್ಭದಲ್ಲಿ ಸರ್ಕಾರ ಸಹಕಾರಿ ಕ್ಷೇತ್ರಕ್ಕೆ ಮೊದಲ ಆದ್ಯತೆ ನೀಡುವ ನೀತಿಯನ್ನು ರೂಪಿಸುವಂತಾಗಬೇಕು.

2. ಸಹಕಾರಕ್ಕೆ ತೆರಿಗೆ ವಿನಾಯಿತಿ : ಕೇಂದ್ರ ಸರ್ಕಾರ ನೇರ ತೆರಿಗೆ ಸಂಹಿತೆ–2010ನ್ನು ಸಹಕಾರಿ ರಂಗಕ್ಕೂ ಅನ್ವಯಿಸಿ ಜಾರಿಗೆ ತರಲು ಮುಂದಾಗಿದ್ದು ಸಹಕಾರಿ ರಂಗ ಈಗಾಗಲೇ ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಬೇಕು.

ಗ್ರಾಹಕ ಮತ್ತು ಮಾರುಕಟ್ಟೆ ವ್ಯವಹಾರದಲ್ಲಿ ಖಾಸಗೀರಂಗ ಸಹಕಾರಿ ರಂಗಕ್ಕೆ ತೀವ್ರ ಅನಾರೋಗ್ಯಕರವಾದ ಸ್ಪರ್ಧೆ ಒಡ್ಡುತ್ತಿದ್ದು ಇದರಿಂದಾಗಿ ಸಹಕಾರಿ ರಂಗಕ್ಕೆ ತೀವ್ರ ಅನ್ಯಾಯವಾಗುತ್ತಿರುವುದರಿಂದ ಗ್ರಾಹಕ ಮತ್ತು ಮಾರುಕಟ್ಟೆ ವ್ಯವಹಾರದ ತೆರಿಗೆಯಲ್ಲಿ ವಿಶೇಷ ರಿಯಾಯಿತಿ ನೀಡಬೇಕು ಹಾಗೆಯೇ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ವಿಧಿಸುವ ಮಾರುಕಟ್ಟೆ ಶುಲ್ಕದಲ್ಲೂ ಇನ್ನಷ್ಟು ರಿಯಾಯಿತಿಗಳು ಸಹಕಾರಕ್ಕೆ ದೊರಕಬೇಕು.

3. ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆ : ಸಹಕಾರ ಶಿಕ್ಷಣ, ಸಂಶೋಧನೆ, ಅಭಿವೃದ್ಧಿ ಹಾಗೂ ವೃತ್ತಿಪರತೆ, ತಾಂತ್ರಿಕತೆಗೆ ವಿಶೇಷ ಮಹತ್ವ ನೀಡುವ ಸಲುವಾಗಿ ಕರ್ನಾಟಕದಲ್ಲಿ ಪೂನಾದ ಡಾ॥ವೈಕುಂಠ ಮೆಹ್ತಾ ಸಹಕಾರಿ ಶಿಕ್ಷಣ ಸಂಸ್ಥೆಯ ಸ್ವರೂಪದ ಸಹಕಾರಿ ಮಹಾವಿದ್ಯಾಲಯ ಸ್ಥಾಪನೆಯಾಗಬೇಕು. ಇದರ ಜೊತೆಯಲ್ಲಿ ಸಹಕಾರಿ ಶಿಕ್ಷಣದ ಗುಣಮಟ್ಟ ವೃದ್ಧಿ ಮತ್ತು ಯುವಕರನ್ನು ಸಹಕಾರಕ್ಕೆ ಆಕರ್ಷಿಸುವ ದೃಷ್ಟಿಯಿಂದ ದೇಶಕ್ಕೆ ಸಹಕಾರ ಚಳುವಳಿಯನ್ನು ಕರ್ನಾಟಕದ ಮೂಲಕ ನೀಡಿದ ದೇಶದ ಸಹಕಾರಿ ಪಿತಾಮಹ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲರ ಹೆಸರಿನಲ್ಲಿ ದೇಶದಲ್ಲೇ ಮೊಟ್ಟ ಮೊದಲನೆಯದಾದ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪಿಸುವ ನಿರ್ಣಯ ಮುಂದಿನ ರಾಜ್ಯ ಸರ್ಕಾರದ್ದಾಗಿರಬೇಕು.

4. ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ನ್ಯಾಯಾಲಯಗಳ ವ್ಯವಸ್ಥೆ : ಈಗಾಗಲೇ ಕರ್ನಾಟದಲ್ಲಿ ಸುಮಾರು 60,000ದಷ್ಟು ವ್ಯಾಜ್ಯಗಳು ಸಹಕಾರಿ ನಿಬಂಧಕರ ನ್ಯಾಯಾಲಯದಲ್ಲಿ ವಿಲೇವಾರಿಗೆ ಬಾಕಿ ಇರುತ್ತದೆ. ತ್ವರಿತ ಹಾಗೂ ನ್ಯಾಯ ಸಮ್ಮತವಾದ ತೀರ್ಮಾನಗಳ ದೃಷ್ಟಿಯಿಂದ 1959ರ ಸಹಕಾರಿ ಕಾಯ್ದೆ ಕಲಂ 70 ಸಂಪೂರ್ಣ ರದ್ಧತಿಯಾಗಿ ಕನಿಷ್ಠ ಜಿಲ್ಲೆಗೊಂದರಂತೆ ಸಹಕಾರಿ ಜ್ಯುಡೀಷಿಯಲ್ ನ್ಯಾಯಾಲಯಗಳು ಸ್ಥಾಪನೆಯಾಗಬೇಕು.

5. ವಿಧಾನಪರಿಷತ್ತಿನಲ್ಲಿ ಸಹಕಾರಿ ರಂಗದ ಪ್ರತಿನಿಧಿ : ಶಿಕ್ಷಣ, ಪದವೀಧರ, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಸ್ಥಾನ ಹೊಂದಿರುತ್ತಾರೆ. ಆದರೆ ಸುಮಾರು 35,000ದಷ್ಟು ಸಂಸ್ಥೆಗಳನ್ನು ಹೊಂದಿರುವ ಸಹಕಾರಿ ರಂಗಕ್ಕೆ ಇದರ ಕೊರತೆಯಿದೆ. ಸಹಕಾರಿ ರಂಗದ ಪ್ರತಿನಿಧಿ ವಿಧಾನಪರಿಷತ್ತನ್ನು ಪ್ರವೇಶಿಸುವುದು ಅವಶ್ಯಕತೆಯಿರುವುದರಿಂದ ಸಹಕಾರದ ನಿರ್ದೇಶಕರನ್ನು ಪ್ರತಿನಿಧಿಸಿ ಸಹಕಾರಿ ರಂಗಕ್ಕೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಸ್ಥಾನ ದೊರೆಯುವಂತಾಗಬೇಕು.

6. ಸಲಮನ್ನಾ, ಬಡ್ಡಿಮನ್ನಾಕ್ಕೆ ಸ್ಪಷ್ಟ ನೀತಿ : ಸಾಲಮನ್ನಾ, ಬಡ್ಡಿ ಮನ್ನಾದ ಸೌಲಭ್ಯ ರೈತರಿಗೆ ದೊರಕಬೇಕಾದುದು ಸಹಜ ನ್ಯಾಯ. ಆದರೆ ಇದಕ್ಕೆ ಸ್ಪಷ್ಟ ನೀತಿಯಿಲ್ಲದೇ ವರ್ಷಗಟ್ಟಲೆಯಿಂದ ಬಡ್ಡಿ ಮನ್ನಾ, ಸಾಲ ಮನ್ನಾದ ಮೊಬಲಗು ಕೃಷಿ ಪತ್ತಿನ ಸಂಘಕ್ಕೆ ಸರ್ಕಾರದಿಂದ ಬರಲು ಬಾಕಿಯಿದ್ದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಆರ್ಥಿಕತೆ ಮೇಲೆ ಹೊಡೆತ ಬೀಳುವಂತಾಗಿದೆ. ಹಾಗೆಯೇ ಕೆಲವೆಡೆ ಭ್ರಷ್ಟಾಚಾರ, ಅವ್ಯವಹಾರಗಳಿಗೆ ಕಾರಣವಾಗಿದೆ. ಆದ್ದರಿಂದ ಈ ವಿಷಯದಲ್ಲಿ ಪ್ರಾಥಮಿಕ ಸಂಘಗಳಿಗೆ ಯಾವುದೇ ರೀತಿಯಲ್ಲಿ ಹೊರೆಯಾಗದ ಸ್ಪಷ್ಟ ನೀತಿ ರೂಪಣೆಯಾಗಬೇಕು.

7. ಪ್ರೊ. ವೈದ್ಯನಾಥನ್ ವರದಿ ಸಂಪೂರ್ಣ ಜಾರಿ : ಪ್ರೊ. ವೈದ್ಯನಾಥನ್ ಸಮಿತಿ ವರದಿಯು ಕರ್ನಾಟಕದಲ್ಲಿ ಭಾಗಶಃ ಜಾರಿಯಾಗಿದ್ದು ಇನ್ನು ಕೂಡ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದಿರುವುದಿಲ್ಲ. ಕೃಷಿ ಪತ್ತಿನ ಸಂಘಗಳಿಗೆ (PACS) ಸಂಬಂಧಿಸಿ ಜಾರಿಯಾಗಿದ್ದರೂ ಪೂರ್ಣ ಪ್ರಮಾಣದ ಫಲ ಸಹಕಾರಿ ರಂಗಕ್ಕೆ ಇನ್ನೂ ದೊರೆತಿಲ್ಲ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ (PCARDBK) ಸಂಬಂಧಿಸಿ ಈ ವರದಿ ಇನ್ನೂ ಜಾರಿಗೆ ಬಂದಿರುವುದಿಲ್ಲ. ಆದ್ದರಿಂದ ಕೃಷಿ ಸಾಲ ವ್ಯವಸ್ಥೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಯಥಾವತ್ತಾಗಿ ಪ್ರೊ. ವೈದ್ಯನಾಥನ್ ವರದಿ ಜಾರಿಯಾಗಬೇಕು.

8. ರಾಜ್ಯದ 1959 ಕಾಯ್ದೆಯ ಸಹಕಾರಿ ಸಂಘಗಳ ಮೇಲ್ವಿಚಾರಣೆಗೆ ಚುನಾಯಿತ ಪ್ರತಿನಿಧಿಗಳ ಕಾನೂನು ಬದ್ಧ ಮಂಡಳಿ (Statuatory Body) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಮಾದರಿಯಲ್ಲಿ ರಚನೆಯಾಗಬೇಕು.

ಸಹಕಾರದ ಬಲವರ್ಧನೆಗೆ ಅಗತ್ಯವಿರುವ ಮೇಲ್ಕಾಣಿಸಿದ ವಿಚಾರಗಳು ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿ ಸೇರ್ಪಡೆಯಾಗಬಹುದೆ? ನಿರೀಕ್ಷಿಸೋಣ.

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20

SRI SOFT VISION
Technologies

SmartOgle
The Complete Banking Solutions

ಸೌಹಾರ್ದ/ಪತ್ತಿನ/ವಿವಿಧೋದ್ದೇಶ ಸಹಕಾರಿಗಳು/ ಪ್ರಾಥಮಿಕ ಕೃಷಿ ಪತ್ತಿನ(PACS & TAPCMS)/
ನೌಕರರ ಸಹಕಾರಿಗಳು, ಇತರೆ ಹಣಕಾಸು ಸಂಸ್ಥೆಗಳು, ಅರ್ಬನ್/ಟೌನ್ ಬ್ಯಾಂಕುಗಳು

ಸಂಪೂರ್ಣ ಗಣಕೀಕೃತ ವ್ಯವಸ್ಥೆ ಅಳವಡಿಸಿಕೊಳ್ಳಲು ಸಂಪರ್ಕಿಸಿ
(ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ವರದಿಗಳನ್ನು ಒಳಗೊಂಡಿದೆ)

SMS Interface using Mobile or SMS Gateway

Broad band Internet Connection — SMS Gate Way — Mobile Tower Receiver

ಶ್ರೀ ತಂತ್ರಾಂಶದಲ್ಲಿ ಕೆಲಸ ನಿರ್ವಹಿಸುವುದು ಅತ್ಯಂತ ಸರಳವಾಗಿದ್ದು, ಸಹಕಾರಿ ಸಿಬ್ಬಂಧಿಗಳಿಗೆ ಸಂಪೂರ್ಣ ತರಬೇತಿ ನೀಡಲಾಗುವುದು ಪ್ರತ್ಯೇಕ ಕಂಪ್ಯೂಟರ್ ಬೇಸಿಕ್ ತರಬೇತಿ / ಯಾವುದೇ ಪದವಿ / ಟ್ಯಾಲಿ / ಅವಶ್ಯಕತೆ ಬೇಕಾಗುವುದಿಲ್ಲ.

Hand held Machine Connectivity

Scalability :
- Same software can be used for core Banking when following comunication system is in place.
  Option A : Using VPN Network/Using Leased Line/ISDN Line
  Option B : Using VSAT Network
- Scalable to Net Banking.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿಗಳಿಗೆ ವೈಧ್ಯನಾಥನ್ ವರದಿ ಆಧಾರಿತ 24 ಅಂಶಗಳ (ಸಿ.ಎ.ಎಸ್. ಮತ್ತು ಎಂ.ಐ.ಎಸ್.) ಪ್ರಗತಿ ವರದಿ ಒಳಗೊಂಡಂತೆ ತಂತ್ರಾಂಶವನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ರೂಪಿಸಲಾಗಿದೆ.

Data Transmission from Branches to Central Database :
(In case of Decentralized database system)
- Data transmission can be done using FTP server /E-mail / CD / Pen drive etc.,



Customer Category	No. of Installation
Pacs	314
Credit Society	97
Multipurpose	22
Urban Bank	8
Souharda	52
Employees	5
TAPCMS	3
Finance	3
Other	2
Total	506

* Status as on March 2012

ಶ್ರೀ ಸಾಫ್ಟ್ ವಿಷನ್ ಟೆಕ್ನಾಲಜೀಸ್
ಮಂಜುನಾಥ ನಗರ, 60 ಅಡಿ ರಸ್ತೆ,
ಗೋಕುಲ ಬಡಾವಣೆ, ತುಮಕೂರು.
ಮೊ:7353524777/ 8747976777
9379693599

Service is our motto

Edited, Printed and Published by Sharan Gouda G. Patil –Managing Director, on behalf of Karnataka State Souharada Federal Co operative, Nirman Bhavan complex, Dr. Rajkumar Road, 1st Block, Rajajinagar, Bangalore-560 010